

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor: MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 06 | Issue : 293 | Thursday 01-08-2024 | E-mail : maruti.b.hosamani76@gmail.com | Page: 4 | Price : Rs. 1/-


# ಅಕ್ರಮ ಮರಳು ಸಾಗಾಣಿಕೆ ಸಾಗರ ಕ್ಯಾಂಪ್ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ನರಕ ದರ್ಶನ








**ಮಸ್ಕಿ :** ತಾಲೂಕಿನ ಬುದ್ದಿನ್ನಿ-ಜಾಲವಾಡ್ಗಿ ಹತ್ತಿರದ ನಾಲ್ಕು ಮರಳು ಯಾರ್ಡ್ ನಿಂದ ನಿತ್ಯ ಹಗಲು ರಾತ್ರಿ ಎನ್ನದೇ ಸಾಗರ ಕ್ಯಾಂಪ್ ಮಾರ್ಗವಾಗಿ ಕಾಲುವೆ ರಸ್ತೆ ಮೇಲೆ ಅಕ್ರಮ ಮರಳು ಸಾಗಾಣಿಕೆ ಯಿಂದ ಶಾಲಾ ಕಾಲೇಜ್ ವಿದ್ಯಾರ್ಥಿಗಳು ಸೇರಿ ರೈತರ ಸಂಚಾರಕ್ಕೆ ತೀವ್ರ ತೊಂದರೆ ಯಾಗುತ್ತಿದೆ ಎಂದು ವಿದ್ಯಾರ್ಥಿಗಳು ಲಾರಿ ತಡೆದು ಪ್ರತಿಭಟಿಸಿದರು.

ವಿಷಯ ತಿಳಿಯುತ್ತಿದಂತೆ ಸ್ಥಳಕ್ಕೆ ಭೇಟಿ ನೀಡಿದ ಪಿ.ಎಸ್.ಐ ವೀರೇಶ ಅವರಿಗೆ ಮರಳು ಲಾರಿಗಳ ಓಡಾಟ ತಡೆಗೆ ವಿದ್ಯಾರ್ಥಿಗಳು ಮನವಿ ಸಲ್ಲಿಸಿದರು. ಪಿ.ಎಸ್.ಐ ಮಾತನಾಡುವ ವೇಳೆ ಮದ್ಯ ಪ್ರವೇಶಿಸಿದ ಪೊಲೀಸ್ ಪೇದೆ ಹಿರಿಯ ಪೇದೆ ಸಿದ್ದಪ್ಪ ಲಾರಿ ಮಾಲೀಕ ಮತ್ತು ಚಾಲಕನ ಪರವಾಗಿ ಮಾತನಾಡಿರುವುದರಿಂದ ಸಾರ್ವಜನಿಕರ ಕೆಂಗಣ್ಣಿಗೆ ಗು-ರಿಯಾದರು. ಕೂಡಲೇ ಇತನ ವಿರುದ್ದ ಶಿಸ್ತು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ಸಾರ್ವಜನಿಕರ ಒತ್ತಾಯದ ಮೇರಗೆ ಪೊಲೀಸರು 4 ಲಾರಿಗಳನ್ನು ವಶಕ್ಕೆ ತೆಗೆದು ಕೊಂಡು ತನಿಖೆ ನಡೆಸಿದ್ದಾರೆ.

ದಿನ ನಿತ್ಯ 50 ಕ್ಕೂ ಹೆಚ್ಚು ಲಾರಿಗಳ ಓಡಾಟ ದಿಂದಾಗಿ ಸಾಗರ ಕ್ಯಾಂಪ್ಗೆ ಸಂಪರ್ಕ ಕಲ್ಪಿಸುವ ಕಾಲುವೆ ರಸ್ತೆ ಮೇಲೆ ಭೃಹತ್ ವಾಹನಗಳ ಓಡಾಟ ದಿಂದ ರಸ್ತೆ ಹದ್ದಗೆಟ್ಟಿದೆ. ಇಕ್ಕಟಾದ ರಸ್ತೆಯಿಂದ ಹಾಗೂ ಲಾರಿಗಳ ಉಪ್ಪಟಳ ದಿಂದ ಈಶ್ಯಾನ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಓಡಾಟವನ್ನೇ ನಿಲ್ಲಿಸಿದೆ. ಹಿಗಾಗಿ ನಿತ್ಯ ಶಾಲಾ ಕಾಲೇಜುಗಳಿಗೆ ತೆರಳುವ 30 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ನಿತ್ಯ 10 ಕಿ.ಮೀ. ನಡೆಯ ಬೇಕಾದ ಅನಿವಾರ್ಯತೆ ಬಂದಿದೆ.

ವಿದ್ಯಾರ್ಥಿಗಳು ನಿತ್ಯ ಶಾಲಾ ಕಾಲೇಜಿಗೆ ತೆರಳಲು ಬಳಗಾನೂರು-ಪೋತ್ನಾಳ ಮಾರ್ಗ ದಿಂದ ಮಧ್ಯದಲ್ಲಿ ಬರುವ ಸಾಗರ ಕ್ಯಾಂಪ್ಗೆ ತೆರಳಲು ಬಸ್ ಇಕ್ಕಟ್ಟಾದ ರಸ್ತೆಯಲ್ಲಿ ಸಂಚರಿಸ ಬೇಕು. ಓವರ್ ಲೋಡ್ ಹಾಗೂ ಹಗಲು ರಾತ್ರಿ ಎನ್ನದೇ ಮರಳು ಸಾಗಾಣಿಕೆಯಲ್ಲಿ ತೊಡಗಿರುವ ಲಾರಿಗಳ ಓಡಾಟ ದಿಂದ ಬಸ್ ಸಂಚರಿಸಲು ಅಡಚಣೆ ಮಾಡಿದ್ದಾರೆ. ಸುಮಾರು 4-5 ಕಿಲೋ ಮೀಟರ್ ಸೈಡ್ ತೆಗೆದು ಕೊಳ್ಳಲು ಬಸ್ ಹಿಂದುಗಡೆ ಸಂಚರಿಸಿದ್ದ ರಿಂದ ಪ್ರಯಾಣಿಕರಿಗೆ, ವಿದ್ಯಾರ್ಥಿಗಳಿ ಜೀವ ಭಯ ಉಂಟಾಗಿರುವ ಘಟನೆ ಜರುಗಿದೆ.

ಸರಕಾರದ ನಿಯಮ ಗಾಳಿಗೆ ತೂರಿ - ಮರಳು ಯಾರ್ಡ್ ಮಾಲೀಕರು ಹಾಗೂ ಲಾರಿ ಮಾಲೀಕರು, ಚಾಲಕರು ಸರಕಾರ ನಿಯಮಗಳನ್ನು ಗಾಳಿಗೆ ತೂರಿ ಅಕ್ರಮ ಮರಳು ಸಾಗಾಣಿಕೆಯಲ್ಲಿ ತೊಡಗಿದ್ದಾರೆ ಎಂದು ಸಾರ್ವಜನಿಕರು ದೂರಿದ್ದಾ-ರೆ. ಸಾಯಂಕಾಲ 6 ಗಂಟೆಯ ನಂತರ ಮರಳು ಸಾಗಾಣಿಕೆ ಸ್ಥಗಿತ ಗೊಳ್ಳಬೇಕು. ಓವರ್ ಲೋಡ್ ಮರಳು ಸಾಗಾಣಿಕೆ ಯಾಗುತ್ತಿರುವುದು. ಒಂದೇ ರಾಯಾಲ್ಟಿಯಲ್ಲಿ 3-4 ಟ್ರೇಪ್ ಅಕ್ರಮವಾಗಿ ಮರಳು ಸಾಗಾಣಿಕೆ ಮಾಡುತ್ತಾರೆ ಎಂದು ಸಾರ್ವಜನಿಕರು ದೂರಿದ್ದಾರೆ.

ನಾಲೆ ಕುಸಿಯುವ ಭೀತಿ - ತುಂಗ ಭದ್ರ ಎಡದಂಡೆ ನಾಲೆಯ ಉಪ ಕಾಲುವೆಗಳ ಮೇಲೆ ಓವರ್ ಲೋಡ್ ಮರಳು ಸಾಗಣಿಕೆ ಮಾಡುತ್ತಿರುವ ಹಿನ್ನನೆಲೆಯಲ್ಲಿ ಕಾಲುವೆ ಕುಸಿಯುವ ಭೀತಿ ಉಂಟಾಗಿದೆ. ಹೀಗಾಗಿ ರೈತರು ತೀವ್ರ ಆತಂಕಕ್ಕೆ ಒಳಗಾಗಿದ್ದಾರೆ. ಈ ಸಂದರ್ಭದಲ್ಲಿ ವೆಂಕಟೇಶನಾಯಕ, ರಮಣಾರೆಡ್ಡಿ, ಶ್ರೀಶೈಲಸಾಯಣ್ಣವರ, ವಿಜಂಯಂಕುಮಾರ, ನಾಗಪ್ಪ, ಬಸವರಾಜ,ಮಂಜುನಾಥ, ರಾಧಾಕೃಷ್ಣ, ಪ್ರತಾಪ, ರಾದಪ್ಪ, ಸೇರಿದಂತೆ ಸಾಗರಕ್ಯಾಂಪಿನ ಮುಖಂಡರು, ಶಾಲಾ ಕಾಲೇಜು ವಿದ್ಯಾರ್ಥಿಗಳು ಇದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್:ಪ್ರತಾಪ್ ವಾಯ್ ಕಿಳ್ಳಿ ಇಲಕಲ್ಲ.**

# ಮಳೆಯನ್ನೇ ನಂಬಿ ಬದುಕುವ ರೈತರ ಅಭಿವೃದ್ಧಿಗೆ ಶ್ರಮಿಸೋಣ - ಶಾಸಕ ಡಾ. ಶ್ರೀ ನಿವಾಸ್.ಎನ್.ಟಿ



**ಕೂಡ್ಲಿಗಿ :** ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರದ ಗುಂಡಿನ ಹೊಳೆಯಲ್ಲಿರುವ ಕೃಷಿ ಬೀಜೋತ್ಪನ ಕೇಂದ್ರದಲ್ಲಿ 2024 -25 ನೇ ಸಾಲಿನ ಜಿಲ್ಲೆ ಮತ್ತು ತಾಲೂಕಾ ರೈತರ ತರಬೇತಿ ಕಾರ್ಯಕ್ರಮ ಹಾಗೂ ಮುಂಗಾರು ಹಂಗಾಮಿನ ದ್ವೈ- ಮಾಸಿಕ ಕಾರ್ಯಗಾರ ಮತ್ತು ಇನ್ನಿತರ ಕಾರ್ಯಕ್ರಮಗಳನ್ನು ದಿ. 31-07-24 ರಂದು ಮಾನ್ಯ ಶಾಸಕರಾದ ಡಾ. ಶ್ರೀನಿವಾಸ್. ಎನ್. ಟಿ. ಅವರು ಉದ್ಘಾಟಿಸಿದರು. ಶಾಸಕರು ಪಾರಂನ್ನು ಪರಿಶೀಲಿಸಿ, ರೈತರ ಆದಾಯದ ಅನುಕೂಲಕ್ಕಾಗಿ ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಇಳುವರಿ ಬರುವಂತೆ ತಮ್ಮ ಮನೆಯ ಸಮ್ಮುಖದ ನರ್ಸರಿಗಳಲ್ಲಿ ತೊಗರಿ ಬೀಜವನ್ನು ಸಸಿ ಬರುವಂತೆ ಸಿದ್ದಪಡಿಸಿ ಕೊಂಡು ಫಲವತ್ತಾದ ಬೆಳೆಗಳನ್ನು ಬೆಳೆಯಲು ಸಲಹೆಗಳನ್ನು ಅಧಿಕಾರಿಗಳಿಗೆ ನೀಡಿದರು. ನಮ್ಮ ಭಾಗದ ರೈತರು ಮಳೆಯನ್ನೇ ನಂಬಿ ಬದುಕುವುದ ರಿಂದ ಕೃಷಿ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲು ಉಪಯುಕ್ತ ಸಲಹೆ ಮತ್ತು ತರಬೇತಿ ನೀಡಲು ತಿಳಿಸಿದರು. ಈ ಸಂದರ್ಭದಲ್ಲಿ ಅಧಿಕಾರಿಗಳು, ರೈತರು ಮತ್ತು ಮುಖಂಡರು ಉಪಸ್ಥಿತರಿದ್ದರು.

**ಹೋಬಳಿ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಕೆ.ಎಸ್.ವೀರೇಶ್.ಕೆ.ಹೊಸಹಳ್ಳಿ**

# ಜಾನುವಾರುಗಳ ಆರೋಗ್ಯ ತಪಾಸಣೆ ಶಿಬಿರ ಯಶಸ್ವಿ



**ಜಮಖಂಡಿ :** ಬಿಎಲ್‌ಡಿಇ ಸಂಸ್ಥೆಯ ಪದವಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಆಶ್ರಯದಲ್ಲಿ ಕೊಣ್ಣೂರ ಗ್ರಾಮದಲ್ಲಿ ಜರುಗುತ್ತಿರುವ ಎನ್‌ಎಸ್‌ಎಸ್ ವಿಶೇಷ ಸೇವಾ ಶಿಬಿರದಲ್ಲಿ ತಾಲ್ಲೂಕಿನ ತುಂಗಳ ಗ್ರಾಮದ ದಿವಂಗತ ಬಾಲವ್ವ ಪಾಂಡಪ್ಪ ಗಿರಡ್ಡಿ ಸ್ಮರಣಾರ್ಥ ಡಾ.ಟಿ.ಪಿ. ಗಿರಡ್ಡಿ ಪ್ರಾಯೋಜಕತ್ವದಲ್ಲಿ ಜಾನುವಾರುಗಳ ಉಚಿತ ಆರೋಗ್ಯ ತಪಾಸಣೆ ಮತ್ತು ಉಪಚಾರ ಶಿಬಿರ ಬುಧವಾರ ಯಶಸ್ವಿಯಾಗಿ ಜರುಗಿತು.

ಕುರಿಗಳು(117), ಆಡುಗಳು(57), ಎಮ್ಮೆ(27) ಹಾಗೂ ಇತರ ಜಾನುವಾರುಗಳು(19) ಸೇರಿದಂತೆ ಒಟ್ಟು 220 ಜಾನುವಾರುಗಳ ಆರೋಗ್ಯ ತಪಾಸಣೆ ಮಾಡಿ ಉಪಚಾರ ನೀಡಲಾಯಿತು. ಒಂದು ಹೋರಿಗೆ ಸಂತಾನ ಹರಣ ಚಿಕಿತ್ಸೆ ನೀಡಲಾಯಿತು.

ಭೇದಿ ಮಾತ್ರೆಗಳು, ಬೆದೆಗೆ ಬರುವ ಮಾತ್ರೆಗಳನ್ನು ವಿತರಿಸಲಾಯಿತು. ಹುಳು ವಿರುದ್ಧ ಸೇರಿದಂತೆ ವಿವಿಧ ರೋಗಗಳಿಗೆ ಚುಚ್ಚುಮದ್ದುಗಳನ್ನು ನೀಡಲಾಯಿತು. ವಿವಿಧ ಮಾತ್ರೆಗಳನ್ನು ಹಾಗೂ ಪೌಡರಅನ್ನು ಜಾನುವಾರುಗಳ ಮಾಲೀಕರಿಗೆ ವಿತರಿಸಲಾಯಿತು.

ಮುಖ್ಯ ಪಶು ವೈದ್ಯಾಧಿಕಾರಿ ಡಾ.ಪಿ.ಎಸ್. ಗೂಳಪ್ಪಗೋಳ, ಕಿರಿಯ ಪಶು ವೈದ್ಯಕೀಯ ಪರಿವೀಕ್ಷಕ ಸಂತೋಷ ಮೆಂಡಿಗೇರಿ, ಪಶುಸಖಿಯರಾದ ಸುಧಾರಾಣಿ ಖಜ್ಜಿಡೋಣಿ, ಸರಸ್ವತಿ ಗಳವಿ, ವಾಹನ ಚಾಲಕ ಮಂಜು ಪೂಜಾರಿ, ಡಿ ದರ್ಜೆ ನೌಕರ ಹನಮಂತ ಗಸ್ತಿ ಹಾಗೂ ಶಿಬಿರಾರ್ಥಿಗಳು ಶಿಬಿರದ ಯಶಸ್ಸಿಗೆ ಶ್ರಮಿಸಿದರು.

ಕೊಣ್ಣೂರಿನ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರದ ಆವರಣದಲ್ಲಿ ನಡೆದ ಶಿಬಿರವನ್ನು ಪಶು ಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಜಮಖಂಡಿ ಆಸ್ಪತ್ರೆಯ ತಜ್ಞ ವೈದ್ಯರು ಹಾಗೂ ಸಿಬ್ಬಂದಿ ನೆರವೇರಿಸಿಕೊಟ್ಟರು. ಎನ್‌ಎಸ್‌ಎಸ್ ಅಧಿಕಾರಿಗಳಾದ ಡಾ.ಎಸ್.ಎಂ. ಬಿಜಾಪುರ, ಡಾ.ವಿನಾಯಕ ಕುಲಕರ್ಣಿ ಶಿಬಿರದ ಉಸ್ತುವಾರಿ ವಹಿಸಿದ್ದರು.

# ಗುರುವಿನ ಮಾರ್ಗದರ್ಶನದಿಂದ ಗುರಿ ಸಾಧ್ಯ

**ರಬಕವಿ-ಬನಹಟ್ಟಿ :** ಜೀವನದಲ್ಲಿ ಯಾವುದೇ ಗುರಿಯನ್ನು ದಾಟಬೇಕಾದರೆ ಪ್ರತಿಯೊಬ್ಬರಿಗೆ ಗುರುವಿನ ಮಾರ್ಗದರ್ಶನ ಮತ್ತು ಸಲಹೆ ಮುಖ್ಯವಾಗಿದೆ. ಆದ್ದರಿಂದ ಶ್ರದ್ಧೆ ಭಕ್ತಿಯಿಂದ ಗುರುವನ್ನು ಆರಾಧಿಸಬೇಕು.

ನಾಡಿನಲ್ಲಿ ಗುರು ಶಿಷ್ಯ ಸಂಪ್ರದಾಯಕ್ಕೆ ತನ್ನದೆಯಾದ ಮಹತ್ವವಿದೆ. ಭಕ್ತರು ಮತ್ತು ಶಿಷ್ಯರಲ್ಲಿಯ ಅಂಧ:ಕಾರವನ್ನು ತೊಡೆದು ಹಾಕಿ ಬೆಳಕನ್ನು ನೀಡುವವರು ಗುರುಗಳು ಎಂದು ತೇರದಾಳ ನಾವಲಗಿಯ ಕಾಡದೇವರ ಗುರು ಗಂಗಾಧರ ಸಂಸ್ಥಾನ ಹಿರೇಮಠದ ಗಂಗಾಧರ ಸ್ವಾಮೀಜಿ ತಿಳಿಸಿದರು.

ಅವರು ಭಾನುವಾರ ಸಮೀಪದ ನಾವಲಗಿ ಗ್ರಾಮದ ಮಠದಲ್ಲಿ ನಡೆದ ಗುರುಪೂರ್ಣಿಮೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಾಯೆಯ ಭವ ಸಾಗರದಿಂದ ಶಿಷ್ಯ ಮತ್ತು ಭಕ್ತರನ್ನು ಹೊರತರುವ ಮತ್ತು ಅವನಿಂದ ಅವಶ್ಯಕವಿರುವ ಸಾಧನೆಯನ್ನು ಮಾಡಿಸಿಕೊಳ್ಳುವ, ಕಠಿಣ ಸಮಯದಲ್ಲಿ ಅವನಿಗೆ ಹತ್ತಿರದಿಂದ ನಿರಪೇಕ್ಷ ಪ್ರೇಮದಿಂದ ಆಧಾರವನ್ನು ನೀಡಿ ಕಷ್ಟಗಳಿಂದ ಮುಕ್ತ ಮಾಡುವವರು ಗುರು.

ಇಂಥ ಗುರುಗಳನ್ನು ಶ್ರದ್ಧೆ ಭಕ್ತಿಯಿಂದ ಗೌರವಿಸುವುದು ಗುರು ಪೂರ್ಣಿಮೆಯ ಉದ್ದೇಶವಾಗಿದೆ ಎಂದು ಗಂಗಾಧರ ಸ್ವಾಮೀಜಿ ತಿಳಿಸಿದರು.

ಇದೇ ಸಂದರ್ಭದಲ್ಲಿ ನಾವಲಗಿಯ ಭಕ್ತರು ಪಾದಪೂಜೆಯನ್ನು ನೆರವೇರಿಸಿದರು.

ಕಾರ್ಯಕ್ರಮದಲ್ಲಿ ಶ್ರೀಶೈಲಯ್ಯ ಹಿರೇಮಠ ಸೇರಿದಂತೆ ನೂರಾರು ಜನರು ಉಪಸ್ಥಿತರಿದ್ದರು.

# ಪತ್ರಕರ್ತ ಸಮಾಜದ ಆಪ್ತ ಸಹಾಯಕ: ಡಾ. ವಿ.ಎಸ್. ಕಟಗಿಹಳ್ಳಿಮಠ




**ಬಾಗಲಕೋಟೆ :** ಪತ್ರಕರ್ತರು ಪ್ರಜೆಗಳ ಆಪ್ತ ಸಹಾಯಕರಿದ್ದಂತೆ. ಸಾರ್ವಜನಿಕ ಸಮಸ್ಯೆಗಳಿಗೆ ಸ್ಪಂದಿಸಿ ಅವರಿಗೆ ನ್ಯಾಯಕೊಡಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಪ್ರತಿಕೋಧ್ಯಮ ಎನ್ನುವುದುಜ್ಞಾನವನ್ನು ಬಿತ್ತರಿಸುವ ವ್ಯವಸ್ಥೆಯಾಗಿದೆಎಂದು ಬಿ.ವಿ.ವಿ ಸಂಘದ ಆಡಳಿತಾಧಿಕಾರಿಗಳಾದ ಡಾ. ವಿ.ಎಸ್. ಕಟಗಿಹಳ್ಳಿಮಠ ಹೇಳಿದರು.

ನಗರದ ಬಿವಿವಿ ಸಂಘದ ಬಸವೇಶ್ವರ ಕಲಾ ಮಹಾವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಿಂದ ಬುಧವಾರ ಪತ್ರಿಕಾ ದಿನಾಚರಣೆ ಅಂಗವಾಗಿ ಹಮ್ಮಿಕೊಳ್ಳಲಾದ ಮಾಧ್ಯಮ ಹಬ್ಬ ಹಾಗೂ ಒಂದು ದಿನದಕಾರ್ಯಾಗಾರವನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದಅವರು 1923ರ ಜುಲೈ 2 ರಂದು ಬಾಗಕೋಟೆಯಲ್ಲಿ ಮೊಟ್ಟಮೊದ ಅಖಿಲ ಕರ್ನಾಟಕ ಪತ್ರಿಕಾ ಪರಿಷತ್ತಿನ ಸಮ್ಮೇಳವಾಗಿತ್ತು, ಮೋರೆ ಹನಮಂತರಾಯರು ಪರಿಷತ್ತಿನ ಅಧ್ಯಕ್ಷರಾಗಿದ್ದರು, ಜಿ.ವಿ.ಗುಂಡಪ್ಪನವರ ಆ ಸಮ್ಮೇಳನ ಉದ್ಘಾಟನೆ ಮಾಡಿ ಪತ್ರಿಕೆಯೆಂಬುದು ಪವಿತ್ರವಾದದ್ದುಆದರ 'ಅದಕ್ಕಿಂತದೊಡ್ಡದಾಗಿದ್ದುದೇಶ ಹಾಗೂ ಪ್ರಜಾಸಮುದಾಯವಾಗಿದೆ, ಪತ್ರಕರ್ತರು ಪ್ರಜೆಯಆಪ್ತಸಹಾಯಕಎಂದು ಹೇಳಿದ ಮಾತು ಇಂದಿಗೂ ಪ್ರಸ್ತುತವಾಗಿದೆ. ಇಡಿ ಕರ್ನಾಟಕಕ್ಕೆ ಪತ್ರಿಕೋದ್ಯಮಎಂದರೆ ಏನು ಎಂದು ಕಲಿಸಿದವರೆ ಬಾಗಕೋಟೆಯವರು ಎಂಬುದು ಸತ್ಯ, ಆ ಕಾಲದಲ್ಲಿ ಸಮಾಜಮುಖಿಯಾಗಿ ಯಾವ ರೀತಿ ಕೆಸ ಮಾಡಬೇಕೆಂದು ತೋರಿಸಿದವರು, ಎಂ.ಪಿ.ಜೋಷಿ, ನಾಯಕರು, ಪುರೊಹಿತ,ಂದುಮಾದವ ಕುಕರ್ಣಿಜೋತೆಗೆ ಮೋರೆ ಹನಮಂತ ರಾಯರ ಪಾತ್ರದೊಡ್ಡದು ಎಂದರು.

ಬಾಗಲಕೋಟೆಮತ್ತು ಪತ್ರಿಕೋದ್ಯಮಕ್ಕೆ ಅವಿನಾಭಾವ ಸಂಬಂಧವಿದೆ. ಮೊದಲ ಅಖಿಲ ಭಾರತ ಪ್ರತೀಕಾ ಸಮ್ಮೇಳನ ಬಾಗಲಕೋಟೆಯಲ್ಲಿನಡೆದಿತ್ತುಪತ್ರಿಕೋದ್ಯಮ ಕಲೆಯುವುದು ಸರಳವಾದರೆ ಅದರ ನೀತಿ ಸಂಹಿತೆಯನ್ನು ಮುಂದುವರಿಸಿಕೊಂಡು ಹೋಗುವುದು ಕ್ಲಿಷ್ಟಕರ ಸಂಗತಿಪತ್ರಿಕೋದ್ಯಮಉದ್ಯಮವಾಗಿಬೆಳೆದ ಮೇಲೆ ಪತ್ರಿಕಾ ವೃತ್ತಿಯಲ್ಲಿಅಮೂಲಾಗ್ರ ಬದಲಾವಣೆಯಾಗಿದೆ. ಸಾಮಾಜಿಕ ಕಳಕಳಿ, ರಾಷ್ಟ್ರಅಭಿಮಾನ ಮೂಡಿಸುವಲ್ಲಿ ಪತ್ರಕರ್ತರ ಪಾತ್ರಬಹಳ ಮುಖ್ಯವಾಗಿದೆ. ಈ ರಂಗಕ್ಕೆ ಪ್ರವೇಶ ಮಾಡುವ ಮೊದಲುಅದರ ಆಳವನ್ನು ತಿಳಿದುಕೊಳ್ಳಬೇಕು ಎಂದರು.


ಕಾರ್ಯಕ್ರಮದಲ್ಲಿ ವರದಿಗಾರರಾದ ವಿನಾಯಕ ಮಠಪತಿಅವರು ಮಾತನಾಡಿ. ಪತ್ರಿಕೋದ್ಯಮದಲ್ಲಿರುವ ಸವಾಲುಗಳನ್ನು ತಿಳಿದುಕೊಂಡು ಹೆಜ್ಜೆಹಾಕುವುದನ್ನು ರೂಡಿಸಿಕೊಳ್ಳಬೇಕು. ವೃತ್ತಿಮೌಲ್ಯಕಾಪಾಡುವಲ್ಲಿ ಭಾವಿ ಪತ್ರಕರ್ತರ ಪಾತ್ರಅಪಾರವಾಗಿದೆ. ಬರೆದ ವರದಿಗಳಿಗೆ ತಕ್ಕ ಪ್ರತಿಫಲ ಸಿಕ್ಕಾಗ ಅದಕ್ಕೆಒಂದುತೂಕ. ವಿದ್ಯಾರ್ಥಿಗಳು ಓದುವುದನ್ನುಕಲಿತಾಗಮಾತ್ರ ಒಳ್ಳೆಯ ಬರವಣಿಗೆ ರೂಪುಗೊಳ್ಳುತ್ತದೆ. ಪತ್ರಿಕೋದ್ಯಮದಲ್ಲಿಉತ್ತರಕರ್ನಾಟಕದವರಕೊಡುಗೆಅಪಾರ. ಪತ್ರಕರ್ತರು ಪ್ರಶ್ನೆ ಮಾಡುವ ಹಕ್ಕನ್ನು ಗಳಿಸಿಕೊಳ್ಳಬೇಕು. ಸಮಾಜದ ಒರೆಕೋರೆಗಳನ್ನು ಅಂಕಣಗಳ ಮೂಲಕ ತಿದ್ದುವ ಕೆಲಸ ಮಾಡಬೇಕು. ಅದಕ್ಕೆ ಬೇಕಾದ ಪೂರ್ವತಯಾರಿ ವಿದ್ಯಾರ್ಥಿ ಮಟ್ಟದಲ್ಲಿಯೇ ಮಾಡಿಕೊಳ್ಳಿ. ಗ್ರಾಮೀಣ ಮಕ್ಕಳು ಪತ್ರಕರ್ತರಾಗಬೇಕು ಎಂಬ ಕಾರ್ಯಾಧ್ಯಕ್ಷರಾದಡಾ.ವೀರಣ್ಣಚರಂತಿವಠ ಸದುದ್ದೇಶದಿಂದ ಪ್ರಾರಂಭವಾದ ಪತ್ರಿಕೋಧ್ಯಮ ಹಾಗೂ ಸಮೂಹ ಸಂವಹನ ವಿಭಾಗ ಕಳೆದ 7 ವರ್ಷದಿಂದ 'ಕಾರ್ಯನಿರ್ವಹಿಸುತ್ತಿರುವುದು ಹೆಮ್ಮೆಯ ವಿಷಯಎಂದರು.

**ಮಾಧ್ಯಮ ಹಬ್ಬದ ಪ್ರಯುಕ್ತ ಮಹಾವಿದ್ಯಾಲಯದ ವಿಧ್ಯಾರ್ಥಿಗಳಿಗೆ ಹಮ್ಮಿಕೊಳ್ಳಲಾದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದವರಿಗೆ ಬಹುಮಾನ ವಿತರಣೆ ಮಾಡಲಾಯಿತು. ಡಾ.ವಿ.ಎಸ್. ಕಟಗಿಹಳ್ಳಿಮಠ ಕನ್ನಡ ಪತ್ರಿಕೋದ್ಯಮದ ಪ್ರಸ್ತುತ ಸ್ಥಿತಿಗತಿ ಎಂಬ ವಿಷಯದ ಬಗ್ಗೆ ಮತ್ತುಅಂಕಣ ಬರವಣಿಗೆಕೌಶಲ್ಯ ಎಂಬ ವಿಷಯದ ಬಗ್ಗೆ ವಿನಾಯಕ ಮಠಪತಿ ಮಾತನಾಡಿದರು.**

ಕಾರ್ಯಕ್ರಮದಅಧ್ಯಕ್ಷತೆ ಸ್ಥಾನ ವಹಿಸಿದ್ದ ಪ್ರಾಚಾರ್ಯರಾದಎಸ್.ಆರ್. ಮೂಗನೂರಮಠಅವರು ಮಾತನಾಡಿ. ಪತ್ರಿಕೋದ್ಯಮ ಹೂವಿನ ಹಾಸಿಗೆಯಲ್ಲ. ವಿಶ್ವಾಸಹರ್ತೆ, ಬದ್ಧತೆಯನ್ನು ರೂಢಿಸಿಕೊಳ್ಳಿ. ಓದುಗರಅಪೇಕ್ಷೆಯ ಮೇಲೆ ಬರಹಇರಬೇಕು. ನಾವು ಬರೆಯುವ ಬರಹಗಳು ಓದುಗರ ಹೃದಯ ಅರಳಿಸಬೇಕು. ಪತ್ರಕರ್ತರು ಸಮಾಜದಕನ್ನಡಿಯಿದ್ದಂತೆಎಂದರು.

ಕಾರ್ಯಕ್ರಮದಲ್ಲಿ ಐ.ಬಿ.ಚಿಕ್ಕಮಠ ಪ್ರಾಸ್ತಾವಿಕವಾಗಿ ಮಾತನಾಡಿದರು, ಪ್ರಾಧ್ಯಾಪಕರಾದ ಎಂ.ಪಿ.ದೊಡವಾಡ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಸಾಹಿತ್ಯ ಲೋಕಕ್ಕೆ ರನ್ನನ ಕೊಡುಗೆ ಅಪಾರ: ಡಾ. ತಿಮ್ಮಣ್ಣ ಅರಳಿಕಟ್ಟಿ



**ಮುಧೋಳ:**ಬಾಗಲಕೋಟೆಜಿಲ್ಲೆ0ಯಮುಧೋಳತಾಲೂಕಿನ ಕನ್ನಡ ಸಾಹಿತ್ಯ ಭವನದ ಆವರಣದಲ್ಲಿ ಮೇಘಮೈತ್ರಿ ಕನ್ನಡ ಸಾಹಿತ್ಯ ಸಂಘ (ರಿ) ಕಮತಗಿ ಹಾಗೂ ಮುಧೋಳದ ಸಂಘ-ಸಂಸ್ಥೆಗಳ ಆಶ್ರ0ಯದಲ್ಲಿ "ಕವಿ ಚಕ್ರವರ್ತಿ ರನ್ನ ಸಾಹಿತ್ಯ ಸಂಭ್ರಮ" ಕಾ0ರ್ಯಕ್ರಮದಲ್ಲಿ ವಿಶೇಷವಾಗಿ ಹಮ್ಮಿಕೊಂಡ ಈ ಕಾ0ರ್ಯಕ್ರಮ ನಾಡಿಗೆ ಮಾದರಿ, ಕನ್ನಡ ಸಾಹಿತ್ಯ ಲೋಕಕ್ಕೆ ರನ್ನ ಕೊಟ್ಟ ಕೊಡುಗೆ ಅಪಾರ ಅಂದಿನಿಂದ ಇಂದಿನ ವರೆಗೂ 0ಯಾರು ಏನನ್ನೇ ಬರೆದರೂ ರನ್ನ ಬರೆದದ್ದೆ ಅನ್ನಿಸುವಷ್ಟು ಆಗಲೇಆಗಲೇಬರೆದಿದ್ದಾರೆಎಂದುತಿಮ್ಮಣ್ಣಅರಳಿಕಟ್ಟಿಅವರು ಹೇಳಿದರು. ಇದೆ ಸಂಧರ್ಭದಲ್ಲಿ ಕಾ0ರ್ಯಕ್ರಮದ ಅಧ್ಯಕ್ಷತೆ ವಹಿಸಿಮಾತನಾಡಿದಡಾ.ಶಿವಾನಂದಕುಬಸದಮೇಘಮೈತ್ರಿ ತಂಡ ಒಂದಿಲ್ಲೊಂದು ವಿಶೇಷ ಹಾಗೂ ವಿಭಿನ್ನ ಕಾ0ರ್ಯಕ್ರಮ ಮಾಡುತ್ತನಾಡಿನ ಜನತೆ0ಯ ಪ್ರೀತಿಗೆ ಪಾತ್ರವಾಗಿದೆ ಆದ್ದರಿಂದ ರಮೇಶ ಕಮತಗಿಗೆ ಮುಧೋಳದ ಎಲ್ಲಾ ಹಿರಿ0ಯರು ಹಾಗೂ ಸಂಘ-ಸಂಸ್ಥೆ0ಯ ಪದಾಧಿಕಾರಿಗಳು ಸಹಕಾರ ನೀಡಿದ್ದೇವೆ ನಮ್ಮ ಸಹಕಾರವನ್ನು ಹುಸಿಗೊಳಿಸದೇ ಕಾ0ರ್ಯಕ್ರಮ ಅತ್ಯಂತ ವಿಶೇಷವಾಗಿ ಮಾಡಿ ನಮ್ಮೆಲ್ಲರ ಮನಸ್ಸು ಗೆದ್ದುಬಿಗಿದ್ದಾನೆ ಎಂದರು.

ನಂತರ ಕವಿ ಚಕ್ರವರ್ತಿ ರನ್ನನ ಕುರಿತು ವಿಶೇಷ ಉಪನ್ಯಾಸವನ್ನು ಪ್ರಚಾ0ರ್ಯ ಮೈನುದ್ದಿನ್ ರೇವಡಿಗಾರ ಆಶ0ಯ ನುಡಿ0ಯನ್ನ ಡಾ. ಪ್ರಕಾಶ್ ಖಾಡೆ ಮಾತನಾಡಿದರು, ರೇವಡಿಗಾರ ಅವರ ರನ್ನನ ಸಾಹಸ ಭೀಮ ವಿಜ0ಯಂ ಎಂಬ ಪುಸ್ತಕ ಲೋಕಾರ್ಪಣೆ0ಯಾಯಿತು ಹಾಗೂ ಕವಿಗೋಷ್ಠಿ0ಯಲ್ಲಿ ರನ್ನನ ಕುರಿತು ಬರೆದ ವಿವಿಧ ಕವಿತೆಗಳನ್ನು ವಿವಿಧ ಲೇಖಕರು ವಾಚನ ಮಾಡಿದರು ಅಧ್ಯಕ್ಷತೆ0ಯನ್ನು ಸಿದ್ದು ದಿವಾನ್ ಆಶ0ಯನುಡಿ0ಯನ್ನು ಸಿದ್ದಣ್ಣ ಬಾಡಗಿ ಮಾತನಾಡಿದರು.ಸಮಾರೋಪ ಸಮಾರಂಭದಲ್ಲಿ ಚಂದ್ರಶೇಖರ ದೇಸಾಯಿ ಸಮಾರೋಪ ನುಡಿ ಮಾತನಾಡಿ ನಾಡಿಗೆ ರನ್ನನನಂತಹ ಸಾಹಿತಿಗಳ ಹಾಗೂ ಸಾಧಕರ ವಿಶೇಷ ಕಾ0ರ್ಯಕ್ರಮ ಮಾಡುವುದರಿಂದ 0ಯುವ ಪೀಳಿಗಿಗೆ ತಿಳಿಸಿದಂತಾಗುತ್ತದೆ ಆ ಕೆಲಸ ಮೇಘಮೈತ್ರಿಯಿಂದ ನಡೆಯಿತ್ತಿದೆ ಎಂದರು. ಅಧ್ಯಕ್ಷತೆ0ಯನ್ನು ಹಿರಿ0ಯ ನಾಗರೀಕ ವೇದಿಕೆ0ಯ ಅಧ್ಯಕ್ಷ ಕಲ್ಲಪ್ಪಣ್ಣ ಸಬರದ ವಹಿಸಿದ್ದರು ಇದೆ ಸಂಧರ್ಭದಲ್ಲಿ ಸಾಂಸ್ಕೃತಿಕ ಕಾ0ರ್ಯಕ್ರಮಗಳ ಜೊತೆಗೆ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ಕವಿ ಚಕ್ರವರ್ತಿ ರನ್ನ ಪ್ರಶಸ್ತಿ ಮತ್ತು ಮಹಿಳಾ ಸಾಧಕರಿಗೆ ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ ಪ್ರಶಸ್ತಿ ಪ್ರದಾನ ಕಾ0ರ್ಯಕ್ರಮ ಜರಗಿತು. ಕಾ0ರ್ಯಕ್ರಮದಲ್ಲಿ ಧ್ವಜರೋಹಣವನ್ನು ರಮೇಶ ನಿಡೋಣಿ, ಸಸಿ ನೆಡುವ ಕಾ0ರ್ಯಕ್ರಮವನ್ನು ಸಂಗಮೇಶ ನೀಲಗುಂದ,ಪುಸ್ತಕ ಮಳಿಗೆ0ಯನ್ನು ಮಹದೇವ ಮಡಿವಾಳರ ಉದ್ಘಾಟಿಸಿದರು,ಮುಧೋಳ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಆನಂದ ಪೂಜಾರಿ ಸ್ವಾಗತಿಸಿದರು, ಮೇಘಮೈತ್ರಿ ಸಂಘದ ಅಧ್ಯಕ್ಷ ರಮೇಶ ಕಮತಗಿ ಪ್ರಾಸ್ತಾವಿಕ ನುಡಿಗಳನ್ನಾಡಿದರು ಈ ಸಮ0ಯದಲ್ಲಿ ಸುರೇಶ ಕೋರಕೊಪ್ಪ,ಅಶೋಕ ಕುಲಕರ್ಣಿ, ಕನ್ನಡ ಸಾಹಿತ್ಯ ಪರಿತ್ತಿನ ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ, ದಾಕ್ಷಾ0ಯಣಿ ಮಂಡಿ, ಎಸ್. ಎಸ್. ಪುರವಾರ, ರಮೇಶ ಅರಕೇರಿ, ವೆಂಕಟೇಶ ಗುಡೆಪ್ಪನವರ, ಆ0ಯ್. ಎಂ. ಧಾರವಾಡಮಠ,ಪಿ.ಬಿ.ಹಿರೇಮಠ,ಎಸ್.ಎಂ.ರಾಮದುರ್ಗ ಇನ್ನಿತರರರು ಇದ್ದರು.

# ವಿಕಸಿತ ಭಾರತದ ದಿಕ್ಸೂಚಿ ಬಜೆಟ್: ವೀರಣ್ಣ ಚರಂತಿಮಠ



**ಬಾಗಲಕೋಟೆ :** ವಿಕಸಿತ ಭಾರತದ ಕನಸನ್ನು ನನಸಾಗಿಸುವಲ್ಲಿ ಈ ಬಜೆಟ್ ಅಡಿಪಾಯವಾಗಲಿದ್ದು, ವಿಕಸಿತ ಭಾರತದ ದಿಕ್ಸೂಚಿಯಾಗಿದೆ ಎಂದು ಹಿಂದಿನ ಶಾಸಕರು, ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ತಿಳಿಸದ್ದಾರೆ.

ಜಾಗತಿಕ ಆರ್ಥಿಕ ಹಿಂಜರಿಕೆಯ ನಡುವೆಯೂ, ಭಾರತದ ಆರ್ಥಿಕ ಬೆಳವಣಿಗೆಯ ಉಜ್ವಲವಾಗಿದ್ದು, ಏರುಗತಿಯಲ್ಲಿ ಮುಂದುವರಿಯುತ್ತಿದೆ, ದೇಶದ ಅರ್ಥ ವ್ಯವಸ್ಥಗೆ ಶರವೇಗ ನಿಡುವ ನಿಟ್ಟಿನಲ್ಲಿ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸತತ 7ನೇ ಬಾರಿಗೆ ಬಜೆಟ್ ಮಂಡಿಸುವ ಮೂಲಕ ದಾಖಲೆ ಬರೆದಿದ್ದು, ಪ್ರಧಾನಿ ನರೇಂದ್ರ ಮೋದಿಜಿ ಅವರ ನೇತೃತ್ವದ 3.0 ವಿಕಸಿತ ಭಾರತ ಬಜೆಟ್ 2024–25 ರಲ್ಲಿ ಅನ್ನದಾತ, ಬಡವ ಹಾಗು ಮಹಿಳೆ ಸೇರಿದಂತೆ ಕೃಷಿಗೆ ಆದ್ಯತೆ, ಸಮಾಜಿಕ ನ್ಯಾಯ, ಉದ್ಯೋಗ, ಉತ್ಪಾದನೆ ಹಾಗೂ ಸೇವಾ ಕ್ಷೇತ್ರ, ನಗರಾಭಿವೃದ್ಧಿ, ಮಹಿಳೆ ಯುವಕರು ರೈತ ಸಮುದಾಯ, ಶಕ್ತಿಮೂಲಗಳು, ಸಂಶೋಧನೆ, ಭವಿಷ್ಯದ ಸುಧಾರಣೆಗಳು ಸೇರಿದಂತೆ ಈ 9 ಕ್ಷೇತ್ರಗಳಿಗೆ ಪ್ರಮುಖವಾಗಿ ಆಧ್ಯತೆ ನೀಡಲಾಗಿದೆ, ಕೌಶಲ್ಯ, ಮಧ್ಯಮವರ್ಗ, ನೀರುದ್ಯೋಗ, ಎಮ್.ಎಸ್.ಎಮ್.ಇ ಹಾಗೂ ಧಾರ್ಮಿಕ ಕ್ಷೇತ್ರಗಳ ಅಬಿವೃದ್ಧಿ, ಪ್ರವಾಸೋಧ್ಯಮ ಕ್ಷೇತ್ರಗಳಿಗೂ ಒತ್ತು ನೀಡಲಾಗಿದ್ದು, ಹೊಸ ಆದಾಯ ತೆರಿಗೆ ಮಿತಿಯಲ್ಲಿ ಆದಾಯ ತೆರಿಗೆ ಪಾವತಿದಾರರಿಗೆ ತೆರಿಗೆ ಬಾರ ಕಡಿಮೆಯಾಗಿರುವುದು ಮಧ್ಯಮ ಜನರಿಗೆ ಅನುಕೂಲವಾಗಲಿದೆ. ಕೃಷಿ ಕ್ಷೇತ್ರಕ್ಕೆ 1.52 ಲಕ್ಷ ಕೋಟಿ ರೂ ಅನುದಾನ ಮಿಸಲಿಡಲಾಗಿದ್ದು, ಸುಮಾರು 400 ಜಿಲ್ಲೆಗಳಲ್ಲಿ ಡಿಜಿಟಲ್ ಬೆಳೆ ಸಮಿಕ್ಷೆ, ತರಕಾರಿ ಮಾರುಟ್ಟೆ ಆರಂಭ, ಕೃಷಿಯಲ್ಲಿ ಖಾಸಗಿ ಸಹಭಾಗಿತ್ವಕ್ಕೆ ಆದ್ಯತೆ, ಎಣ್ಣೆ ಬೀಜ ಉತ್ಪಾದನೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ರೈತರಿಗೆ ಉತ್ತೇಜನ ದೇರಿದಂತೆ ಅನೇಕ ಬರಪೂರಕೊಡುಗೆನೀಡಲಾಗಿದೆ. ಮಹಿಳಾ ಸಬಲೀಕರಣಕ್ಕೆ 3ಲಕ್ಷ ಕೋಟಿ, ಗ್ರಾಮೀಣಾಭಿವೃದ್ಧಿಗೆ 2.66 ಲಕ್ಷ ಕೋಟಿ, ಉಚಿತ ಪಡಿತರ ಯೋಜನೆ 2029ರ ವರೆಗೆ ಮುಂದುವರಿಸಿ ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆ 5 ವರ್ಷ ವಿಸ್ತರಣೆ ಮಾಡುವ ಮೂಲಕ ಬಡವರ ಬಗೆಗಿನ ಕಾಳಜಿಯಲ್ಲಿ ರಾಜಿಮಾಡಿಕೊಳ್ಳವು ಪ್ರಶ್ನೆಯೇ ಇಲ್ಲ ಎಂಬ ಸಂದೇಶ ರವಾನಿಸಿದ್ದಾರೆ, ಒಟ್ಟಾರೆ ಈ ಬಾರಿಯ ಬಜೆಟ್ ವಿಕಸಿತ ಭಾರತದ ದಿಕ್ಸೂಚಿಯಾಗಿದ್ದು ಪ್ರಗತಿದಾಯಕ ಬಜೆಟ್ ನೀಡಿರುವ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರಿಗೆ ಅಭಿನಂದನೆಗಳು.

# ಬಜೇಟ್ ದೇಶದ ಅಭಿವೃದ್ಧಿಗೆ ಪೂರಕ: ಸಂಸದ ಕಡಾಡಿ



**ಮೂಡಲಗಿ :** ರೈತರು, ಯುವಕರಿಗೆ, ಮಹಿಳೆಯರಿಗೆ ಹಾಗೂ ಬಡ ವರ್ಗದ ಜನರ ಜೀವನಮಟ್ಟ ಸುಧಾರಿಸಲು, ಹೊಸ ಭರವಸೆ, ಅವಕಾಶಗಳನ್ನು ಸೃಷ್ಟಿಸುವ, ಸದೃಡ, ಸಶಕ್ತ ವಿಕಸಿತ,ವಿಕಸಿತ ಭಾರತ ನಿರ್ಮಾಣದ ನಿಟ್ಟಿನಲ್ಲಿ ಈ ಬಜೆಟ್ ದೇಶದ ಅಭಿವೃದ್ಧಿಗೆ ಪೂರಕವಾಗಿದೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಅವರು ಕೇಂದ್ರ ಸರ್ಕಾರದ ಬಜೇಟ್‌ನ್ನು ಸ್ವಾಗತಿಸಿದ್ದಾರೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದ 3 ನೇ ಅವಧಿಯ ಕೇಂದ್ರ ಸರ್ಕಾರದ ಬಜೆಟ್ ಮಂಗಳವಾರ 2024–25 ನೇ ಸಾಲಿನ ದಾಖಲೆಯ ಸತತ 7 ನೇ ಬಾರಿಗೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬಜೆಟ್ ಮಂಡಿಸಿದರು. ಇದು ಮುಂದಿನ 5 ವರ್ಷಗಳ ದಿಕ್ಸೂಚಿ ಬಜೆಟ್ ಆಗಲಿದ್ದು,2047 ರಲ್ಲಿ ವಿಕಸಿತ ಭಾರತದ ಕನಸನ್ನು ನನಸಾಗಿಸುವ ಅಡಿಪಾಯ ಹಾಕುತ್ತದೆ ಎಂದ ಸಂಸದ ಈರಣ್ಣ ಕಡಾಡಿ ಅವರು ಕೃಷಿ,ಶಿಕ್ಷಣ,ಆರೋಗ್ಯ,ಕೈಗಾರಿಕೆ,ತಂತ್ರಜಾನ,ಹಾಗೂಮೂಲಸೌಕರ್ಯ,ಗ್ರಾಮೀಣ ಅಭಿವೃದ್ಧಿಗೆ ಪೂರಕವಾಗಿದೆ ಎಂದರು.

ರೈತರ ಮೇಲೆ ಹೆಚ್ಚಿನ ಗಮನ ಹರಿಸಿರುವ ಮೋದಿ ಸರ್ಕಾರ ಕೃಷಿ ಮತ್ತು ಕೃಷಿ ಸಂಬಂಧಿಸಿರುವ ವಲರಕ್ಕೆ ರೂ1.52ಲಕ್ಷಕೋಟಿಅನುದಾನನಿಗಧಿಪಡಿಸಲಾಗಿದೆ. ರೈತರಿಗಾಗಿಕಿಸಾನ್‌ಕ್ರೇಡಿಟ್‌ಕಾರ್ಡ,ಸಾವಯವ ಕೃಷಿ,ಹಳ್ಳಿಗಳ ಅಭಿವೃದ್ಧಿ ಒತ್ತು,ಡಿಜಿಟಲ್ ಭೂ ಆಧಾರ್ ಯೋಜನೆ ಘೋಷಣೆ ಗ್ರಾಮೀಣ ಭಾಗದಲ್ಲಿ ಭೂ ಸುಧಾರಣೆಗೆ ಹೆಜ್ಜೆ,ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ 3 ಕೋಟಿ ಹೊಸ ಮನೆಗಳ ನಿರ್ಮಾಣಕ್ಕೆ ನಿರ್ಧಾರ. ಗ್ರಾಮೀಣ ಅಭಿವೃದ್ಧಿಗೆ ರೂ 2.66 ಲಕ್ಷ ಕೋಟಿ ಹೆಚ್ಚಿನ ಒತ್ತು ನೀಡಿದ್ದಾರೆಂದರು.

ಎಸ್‌ಸಿ,ಎಸ್‌ಟಿ ಕುಶಲಕರ್ಮಿಗಳಿಗೆ ವಿಶೇಷ ಆದ್ಯತೆ,ಮುದ್ರಾ ಯೋಜನೆಗೆ ರೂ 10 ಲಕ್ಷದಿಂದ 20 ಲಕ್ಷ ವರೆಗೆ ಸಾಲ ಹೆಚ್ಚಳ,ಉನ್ನತ ಶಿಕ್ಷಣಕ್ಕೆ ವಿದ್ಯಾರ್ಥಿಗಳಿಗೆ ರೂ 10 ಲಕ್ಷವರೆಗೆ ಸಾಲ ಸೌಲಭ್ಯ,ಪ್ರತಿ ವರ್ಷ 1 ಕೋಟಿ ವಿದ್ಯಾರ್ಥಿಗಳಿಗೆನೇರ ಸಾಲ ಸೌಲಭ್ಯ,ಪಿಎಂ ಸೂರ್ಯ ಘರ್ ಯೋಜನೆಯಡಿ 1 ನೇ ಕೋಟಿ ಮನೆಗಳಿಗೆ 300 ಯುನಿಟ್ ಉಚಿತ ವಿದ್ಯುತ್,1 ಕೋಟಿ ಯುವಕರಿಗೆ 500ದೊಡ್ಡಕಂಪನಿಗಳಲ್ಲಿಇಂಟರ್ನ್‌ಶಿಫ್,ಯುವಕರಿಗೆ 12 ತಿಂಗಳು ತರಬೇತಿ ನೀಡಲಾಗುವುದು ಮತ್ತು ತಿಂಗಳಿಗೆ ರೂ 5 ಸಾವಿರ ವೇತನ ನೀಡಲಾಗುವುದು ಎಂದರಲ್ಲದೇ ಟಿಡಿಎಸ್ ಕಡಿಮೆಗೊಳಿಸಿರುವುದು ಸೇರಿದಂತೆ ಬಜೇಟ್ ಅತ್ಯಂತ ಆಶಾದಾಯಕವಾಗಿದೆ ಎಂದು ಬಜೇಟನಲ್ಲಿರುವ ಅಂಶಗಳನ್ನು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಕೊಂಡಾಡಿದರು.

# ಮಾಧ್ಯಮಗಳು ಸಮಾಜದ ಪರವಾಗಿ ಕೆಲಸ ಮಾಡಬೇಕು: ನಳಿನ್ ಅತುಲ್




**ಕೊಪ್ಪಳ :** ಮಾಧ್ಯಮಗಳ ಸುದ್ದಿಯ ಮಾಹಿತಿ ಗುಣಾತ್ಮಕವಾಗಿರಬೇಕು. ಮಾಧ್ಯಮಗಳಿಗೆ ಜವಬ್ದಾರಿಯಿರಬೇಕು. ಸರಕಾರಿ ಅಧಿಕಾರಿಗಳು ಮತ್ತು ಮಾಧ್ಯಮ ಮಿತ್ರರ ನಡುವೆ ಉತ್ತಮವಾದ ಸಂಬಂಧವಿರಬೇಕು. ಎಲ್ಲ ಮಾಧ್ಯಮಗಳ ಸಮಾಜ ಪರವಾಗಿ ಕೆಲಸಮಾಡಬೇಕು.ಇಬ್ಬರುನಡುವೆ ಚರ್ಚೆ, ಸಂವಾದ ನಡೆಯಬೇಕು ಎಂದು ಜಿಲ್ಲಾಧಿಕಾರಿ ನಳಿನ್ ಅತುಲ್ ಹೇಳಿದರು.

ಅವರು ಇಂದು ನಗರದ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಬಹುತ್ವಮೀಡಿಯಾ ಹೌಸ್, ಬಹುತ್ವ ಬಳಗ ಕೊಪ್ಪಳ ನೇತೃತ್ವದಲ್ಲಿ ಸಮೂಹ ಸಂವಹನ ಹಾಗೂ ಪತ್ರಿಕೋದ್ಯಮ ವಿಭಾಗ ಕೊಪ್ಪಳ ವಿಶ್ವವಿದ್ಯಾಲಯ, ಸಮೂಹನ ಸಂವಹನ ಹಾಗೂ ಪತ್ರಿಕೋದ್ಯಮ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ,ಸಮೂಹ ಸಂವಹನ ಹಾಗೂ ಪತ್ರಿಕೋದ್ಯಮ ವಿಭಾಗ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕೊಪ್ಪಳ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕೊಪ್ಪಳ ಹಾಗೂ ವಿವಿಧ ಕಾಲೇಜುಗಳ ಸಹಯೋಗದಲ್ಲಿ, ಕಿರ್ಲೋಸ್ಕರ್ ಫೆರಸ್ ಇಂಡಸ್ಟ್ರೀಸನವರ ಸಹಕಾರದೊಂದಿಗೆ ಕೊಪ್ಪಳ, ವಿಜಯನಗರ ಹಾಗೂ ಬಳ್ಳಾರಿ ಜಿಲ್ಲೆಯ ಸಮೂಹ ಸಂವಹನ ಹಾಗೂ ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಳ್ಳಲಾಗಿದ್ದ ಎರಡು ದಿನಗಳ ಕೊಪಣ ಮೀಡಿಯಾ ಫೆಸ್ಟ್ ಕಾರ್ಯಕ್ರಮವನ್ನು ಸಸಿಗೆ ನೀರು ಎರೆಯುವುದರ ಮೂಲಕ ಉದ್ಘಾಟಿಸಿ ಮಾತನಾಡುತ್ತಿದ್ದರು.

'ಸಂವಿಧಾನದಓದುಪುಸ್ತಕಒಳ್ಳೆಯ ಪುಸ್ತಕ ಈ ಪುಸ್ತಕವನ್ನುಎಲ್ಲ ವಿಧ್ಯಾರ್ಥಿನಿಯರು ಓದಬೇಕು.ಈ ಪುಸ್ತಕವುಎಲ್ಲರಿಗೂಸಂವಿಧಾನದ ಕುರಿತುಕನಿಷ್ಠತಿಳುವಳಿಕೆಮೂಡಿಸುತ್ತದೆ. ಎಲ್ಲರೂ ಸಂವಿಧಾನವನ್ನು ಓದಬೇಕು. ಸ್ವಾತಂತ್ರ್ಯ,ಸಮಾನತೆ ಬಹಳಮಹತ್ವವಾದದ್ದು.ಮುದ್ರಣ ಯಂತ್ರ ಕಂಡು ಹಿಡಿದ ನಂತರ ಪಾಶ್ಚತ್ಯ ದೇಶಗಳ ಓದುವುದು ಪರಾರಂಭವಾಯಿತು. ಇದರಿಂದ ಜನರಲ್ಲಿ ಹೊಸ ಅಲೋಚನೆಗಳು ಚಳುವಳಿಗಳು ಹುಟ್ಟಿಕೊಂಡವು. ಇದರಿಂದ ಅಡಳಿತ ಸುಧಾರಣೆ ಮತ್ತುಇನ್ನಿತರಅಭಿವೃದ್ಧಿಕೆಲಸಗಳು ಪ್ರಾರಂಭವಾದವು. ಮೊದಲು ಮಾಧ್ಯಮಗಳ ಮಾಲಿಕತ್ವವ ಇಬ್ಬರು–ಮೂರು ಜನರಕೈಯಲ್ಲಿ ಇತ್ತು.ಇಂದು ಮಾಧ್ಯಮಗಳ ಮಾಲಿಕತ್ವ ವಿಸ್ತಾರವಾಗಿ ಬೆಳೆದಿದೆ. ಉದಾರೀಕರಣದ ನಂತರ ದಿನದ ಇಪ್ಪತುನಾಲ್ಕು ಗಂಟೆಗಳ ಕಾಲ ಟಿವಿಗಳಲ್ಲಿ ಸುದ್ದಿಗಳು ಕಾರ್ಯಕ್ರಮಗಳು ಪ್ರಸಾರವಾಗುತ್ತವೆ. ಈಗ ಸಾಮಾಜಿಕ ಜಾಲತಾಣಗಳು ಬಂದಿವೆ. ಯಾರೂ ಬೇಕಾದರೂ ಮಾಹಿತಿಯನ್ನುಹೇಗೆಬೇಕಾದರೂ ಮಾಹಿತಿಯನ್ನುಬರೆಯಬಹುದು. ನಾವು ಪ್ರಜಾಸತ್ತಾತ್ಮಕದೇಶದಲ್ಲಿ ಬದುಕುತ್ತಿದ್ದೇವೆ. ಸತ್ಯ ಏನು ಎಂಬುದು ಎಲ್ಲರಿಗೂ ರವಾನೆಯಾಗುತ್ತದೆ. ಮಾಧ್ಯಮ ಹಬ್ಬಗಳಬಹಳಮಹತ್ವವಾದದ್ದವು. ನಿಮ್ಮಲ್ಲಿ ದುಡ್ಡು ಇಲ್ಲದಿದ್ದರೂ ಸಹ ಅನ್‌ಲೈನ್ ಮಾಧ್ಯಮಗಳು ಪ್ರಾರಂಭ ಮಾಡಬಹುದು ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದಜಿಲ್ಲಾಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್‌ರತ್ನಮ್ ಪಾಂಡೆಯ ಮಾತನಾಡಿ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವು ಮಾಧ್ಯಮಗಳ ಮೂಲಭೂತ ಹಕ್ಕು ಇದಕ್ಕೆ ಯಾವುದೇ ರೀತಿಯ ತೊಂದರೆಯಾಗಬಾರದು ಎಂದು ಸುಪ್ರಿಂಕೋರ್ಟ್ ಹೇಳಿದೆ. ಮಾಧ್ಯಮಗಳ ಪಾತ್ರರಾಷ್ಟ ನಿರ್ಮಾಣದಲ್ಲಿ ಬಹಳ ಮಹತ್ವವಾದದ್ದು.ಮಾಧ್ಯಮಗಳು ಸುದ್ದಿ ನೀಡುವಾಗ ಪರಿಶೀಲನೆ ಮಾಡಬೇಕು.ಜನರ ಸಮಸ್ಯೆಗಳ ಮತ್ತು ಸಮಾಜಿಕ ಸಮಸ್ಯೆಗಳ ಕುರಿತು ಮಾಧ್ಯಮಗಳು ವರದಿಗಳು ಮಾಡಬೇಕು. ಎಲ್ಲರು ನಮ್ಮ ಸಮಾಜವನ್ನು ಯಾವ ಮಟ್ಟದಿಂದ ಬದಲಾವಣೆ ಮಾಡಬೇಕು ಎಂಬುದನ್ನು ಚಿಂತೆ ಮಾಡಬೇಕು.ಈಗ ಕಾಸಿಗಾಗಿ ಸುದ್ದಿ ಮಾಡಬಾರದು. ದುಡ್ಡು ತೆಗೆದುಕೊಂಡು ಸುದ್ದಿ ಬರೆಯಬಾರದು. ಮಾಧ್ಯಮಗಳು ಒಳ್ಳೆಯ ವಿಷಯಗಳ ಕುರಿತು ಚರ್ಚೆ ಮಾಡಬೇಕು. ನಾವು ಮಾಧ್ಯಮಗಳ ಜೊತೆ ಸಂವಾದ ಮಾಡಬೇಕು. ಮಾಧ್ಯಮವು ಒಂದುಶಕ್ತಿಯುತವಾದಆಯುಧ. ಸ್ಥಳಿಯ ಪತ್ರಕರ್ತರು ಹೆಚ್ಚು ಕೆಲಸ ಮಾಡುತ್ತಾರೆ. ಇವರು ಹಳ್ಳಿ ಹಳ್ಳಿಗೆ ಹೋಗಿ ಮಾಹಿತಿಯನ್ನು ಸಂಗ್ರಾಹಿಸಿ ವರದಿಗಳನ್ನು ಮಾಡುತ್ತಾರೆ. ಮುಂದಿನ ವರ್ಷಗಳಲ್ಲಿ ಇನ್ನುದೊಡ್ಡ ಮಟ್ಟದಲ್ಲಿ ಮಾಧ್ಯಮ ಹಬ್ಬಗಳು ನಡೆಯಲಿ ಎಂದು ಹಾರೈಸಿದರು.

ಇನ್ನೋರ್ವಮುಖ್ಯಅತಿಥಿಕೊಪ್ಪಳ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ರಾಮ್.ಎಲ್.ಅರಸಿದ್ದಿಮಾತನಾಡಿ ಮಾಧ್ಯಮಗಳಿಗೆ ಜವಾಬ್ದಾರಿ ಇರಬೇಕು. ಮಾಧ್ಯಮಗಳು ಜನರಲ್ಲಿ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳಬೇಕು. ಈಗ ಎಲ್ಲರೂ ಸಮಾಜಿಕ ಮಾಧ್ಯಮಗಳಲ್ಲಿ ಬರೆಯುತ್ತಾರೆ ಆದ್ದರಿಂದ ಇಂದು ಎಲ್ಲರು ಪತ್ರಕರ್ತರೆ. ಈಗ ಮಾಧ್ಯಮಗಳು ಸಮಾಜದ ಮೇಲೆ ಪ್ರಭಾವ ಬೀರುತ್ತವೆ. ಇಂದು ಹಲವಾರು ವಿಷಯಗಳು ಸಮಾಜಿಕಮಾಧ್ಯಮಗಳಲ್ಲಿವೈರಲ್ ಆಗುತ್ತವೆ. ಹಿರಿಯ ಪತ್ರಕರ್ತರು ವಿದ್ಯಾರ್ಥಿಗಳಿಗೆ ಸಲಹೆಗಳನ್ನು ನೀಡಬೇಕು.ಮುಂದಿನ ವರ್ಷ ಈ ರೀತಿಯ ಮಾಧ್ಯಮ ಹಬ್ಬಗಳು ಇನ್ನಷ್ಟುದೊಡ್ಡ ಮಟ್ಟದಲ್ಲಿ ನಡೆಯಲಿ ಎಂದು ಹೇಳಿದರು.

ಕೊಪ್ಪಳ ಮೀಡಿಯಾ ಕ್ಲಬ್ ಅಧ್ಯಕ್ಷ ಪತ್ರಕರ್ತ ರವಿಂದ್ರ ವಿ.ಕೆ ಮಾತನಾಡಿ ವಿದ್ಯಾರ್ಥಿಗಳಿಗೆ ತರಗತಿಗಳಲ್ಲಿ ಕಲಿತಿದ್ದು ಮಾಧ್ಯಮಗಳಲ್ಲಿ ಸಹಾಯಾಗುವುದಿಲ್ಲ. ಅದ್ದರಿಂದಎಲ್ಲ ವಿದ್ಯಾರ್ಥಿಗಳುಪ್ರಾಯೋಗಿಕವಾಗಿ ಪತ್ರಿಕೋದ್ಯವನ್ನು ಕಲಿಯಿರಿ. ದೇಶ ಕಟ್ಟುವ ಜವಬ್ದಾರಿ ಮಾಧ್ಯಮಗಳ ಮೇಲಿದೆ. ಜಾಗತೀಕರಣ ನಂತರ ಮಾಧ್ಯಮಗಳು ಉದ್ಯಮವಾಗಿ ಬದಲಾದವು. ಸಮಾಜಿಕ ಜಾಲತಾಣಗಳನ್ನು ಯುಟ್ಯೂಬ್‌ಗಳನ್ನು ವಿದ್ಯಾರ್ಥಿಗಳು ಉಪಯೋಗಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಹೊರಗಡೆ ಹೋಗಬೇಕು. ನಮ್ಮ ಭಾಗದ ವಿದ್ಯಾರ್ಥಿಗಳು ಹೆಚ್ಚಿನಉನ್ನತ ಶಿಕ್ಷಣವನ್ನು ಪಡೆಯಬೇಕು.ಈ ಮಾಧ್ಯಮ ಹಬ್ಬ ಉತ್ತಮವಾದ ಕಾರ್ಯಕ್ರಮ ಎಂದು ಹೇಳಿದರು. ಕಾಲೇಜಿನ ಪ್ರಾಂಶುಪಾಲರಾದ ಗಣಪತಿ ಲಮಾಣಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿಪತ್ರಕರ್ತಸಿರಾಜ್ ಬಿಸರಳ್ಳಿ ಕೊಪಣ ಮೀಡಿಯಾ ಫೆಸ್ಟ್ ಹಮ್ಮಿಕೊಂಡಿದ್ದರ ಬಗ್ಗೆ ಮಾತನಾಡಿದರು.

ಕಾರ್ಯಕ್ರಮದ ನಿರೂಪಣೆಯನ್ನ ಬಹುತ್ವ ಬಳಗದ ರಾಜು ಬಿ.ಆರ್ ಹಾಗೂಸ್ವಾಗತವನ್ನುಡಾ.ನರಸಿಂಹ ಗುಂಜಳ್ಳಿ ನೆರವೇರಿಸಿದರು. ಪತ್ರಕರ್ತ ಮಂಜುನಾಥ ಗೊಂಬಾಳ ಸಂವಿಧಾನ ಪೀಠಿಕೆ ವಾಚನ ಮಾಡಿದರು. ಇದೇ ಸಂದರ್ಭದಲ್ಲಿ ಕಾಲೇಜಿನ ಮಹಿಳಾ ವೈಸ್ ಪ್ರಯೋಗಿಕ ಪತ್ರಿಕೆ ಬಿಡುಗಡೆ ಮಾಡಲಾಯಿತು. ಉದ್ಘಾಟಕರನ್ನು ಹಾಗೂ ಅತಿಥಿಗಳನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ಈ ಸಂದರ್ಭಲ್ಲಿ ಬಹುತ್ವ ಬಳಗದ ರಾಜಾಬಕ್ಷಿಹಚ್.ವಿ.ಪತ್ರಕರ್ತರಾದ ಎಂ.ಡಿಕಲೀಲ್‌ಹುಡೇವು,ಅಖಿಲ್ ಹುಡೇವು , ಮಾರುತಿ, ದಾವಲಸಾಬ ಡಾ.ಪಾಷಾ ಎಚ್.ವಿ, ತೀರ್ಪುಗಾರರಾಗಿ ಹಿರಿಯ ಪತ್ರಕರ್ತರಾದ ಸೋಮರಡ್ಡಿ ಅಳವಂಡಿ, ಸಾಧಿಕ್ ಅಲಿ, ಎನ್.ಎಂ.ದೊಡ್ಡಮನಿ, ದತ್ತು ಕಮ್ಮಾರ, ಶ್ರೀಕಾಂತಅಕ್ಕಿಶರಣುಹುಲಿಹೈದರ್, ಮುಕ್ಕಣ್ಣ ಕತ್ತಿ, ಲಕ್ಷ್ಮಣ ಪೀರಗಾರ, ಶ್ರೀಮತಿ ಶೀಲಾ ಹಾಲ್ಕುರಿಕೆ, ಸಿಎಓ ಅಮೀನ ಅತ್ತಾರ್, ಅಮರದೀಪ್ ಪಿ.ಎಸ್., ವಿಠ್ಠಪ್ಪ ಜಾಬಗೌಡರ್ ಆಗಮಿಸಿದ್ದರು. ಈ ಸಂದರ್ಭದಲ್ಲಿ ಅಲ್ಲಾಬಕ್ಷಿ ವಾಲೀಕಾರ್ ತಂಡ ಮತ್ತು ಕಳಕೇಶ ಅರಕೇರಿ ಕಲಾತಂಡಗಳಿಂದ ಸುಗಮ ಸಂಗೀತ ಹಾಗೂ ಜಾನಪದ ಕಾರ್ಯಕ್ರಮ ಜರುಗಿತು. ಕಾಲೇಜಿನ ಪ್ರಾಧ್ಯಪಕರಾದ ಶ್ರೀಮತಿ ಹುಲಿಗೆಮ್ಮ ಸೇರಿದಂತೆ ನಾನಾ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳಅದ್ಯಾಪಕರು, ಉಪನ್ಯಾಶಕರು ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ನಂತರ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧಾ ಕಾರ್ಯಕ್ರಮಗಳು ನಡೆದವು. ಕಾರ್ಯಕ್ರಮದ ಆರಂಭದಲ್ಲಿ ಇಂದು ನಿಧನರಾದ ಸಾಹಿತಿ, ಸಂಘಟಕ ಹನುಮಂತಪ್ಪ ಅಂಡಗಿಯವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

# ಬೆಂಗಳೂರಿನಲ್ಲಿ ಕಲಾವಿದರ ನಿರ್ಲಕ್ಷ್ಯವನ್ನು ಖಂಡಿಸಿ ಪ್ರತಿಭಟನೆ




**ಬೆಂಗಳೂರು :** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿ ಬಂದ ಮೇಲೆ ಸಚಿವರು ಒಂದು ಬಾರಿಯಾದರೂ ನಾಡಿನ ಜಾನಪದ ಸಾಂಸ್ಕೃತಿಕ ಕಲಾವಿದರ ಕುಂದು ಕೊರತೆಗಳನ್ನುಆಲಿಸುವಕುರಿತುಮೀಟಿಂಗ್ ಕರೆಯದೆ ಕಲಾವಿದರ ಸಮಸ್ಯೆಗಳನ್ನು ಆಲಿಸದೆ ಅವರನ್ನು ನಿರ್ಲಕ್ಷಿಸುತ್ತಾ ಅಧಿಕಾರಿಗಳ ಹಂತದಲ್ಲಿ ನಿರ್ಣಯಗಳನ್ನು ತೆಗೆದುಕೊಂಡು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಧನಸಹಾಯ ನೀಡುವಿಕೆಯಲ್ಲಿ ಮಾರ್ಗಸೂಚಿಯನ್ನುಉಲ್ಲಂಘಿಸಿ ಪ್ರಥಮ ಬಾರಿಗೆ ಕಂತುಗಳಲ್ಲಿ ಹಣವನ್ನು ಬಿಡುಗಡೆ ಮಾಡಿ ಕಲಾವಿದರ ಕೋರಿಕೆಯನ್ನು ನಿರ್ಲಕ್ಷಿಸಿದ್ದಾರೆ.

ಜೂನ್ ತಿಂಗಳಲ್ಲಿ ಹಣ ಬಿಡುಗಡೆ ಮಾಡುತ್ತೇನೆಂದು ಹೇಳಿ ಈಗ ವಿಳಂಬ ನೀತಿಯನ್ನು ಅನುಸರಿಸುತ್ತಿರುವ ಇಲಾಖೆ ಅಧಿಕಾರಿಗಳ ವರ್ತನೆಯನ್ನು ಖಂಡಿಸಿ ಬೀದಿಗೆ ಇಳಿದು ಹೋರಾಟ ಮಾಡಲು ಆಸ್ಪದ ಮಾಡಿಕೊಟ್ಟಿದ್ದಾರೆ.

ಈ ಅಧಿಕಾರಿಗಳ ವರ್ತನೆಗೊಂದು ಧಿಕ್ಕಾರವಿರಲಿ ಎಂದು ನೇತೃತ್ವ ವಹಿಸಿದ್ದ ಹಿರಿಯ ಹೋರಾಟಗಾರ ಪಟ್ಲು ಗೋವಿಂದರಾಜ್ ಹೇಳಿದರು.

ಕಳೆದ ಹತ್ತು ವರ್ಷಗಳಿಂದಲೂ ಕೇಂದ್ರ ಕಚೇರಿಯಲ್ಲಿ ಬಿಡುಬಿಟ್ಟಿರುವ ಅಧಿಕಾರಿ ವರ್ಗದ ಸಲಹೆ ಮೇರೆಗೆ ಕಲಾವಿದರ ವಿರೋಧಿ ನೀತಿಯನ್ನು ಅನುಸರಿಸುತ್ತಿರುವ ಇಲಾಖೆಯ ಈ ವರ್ತನೆ ಕಂಡನೀಯ ಮತ್ತು ದುರಹಂಕಾರದ ಪರಮಾವಧಿ ....

ಈ ಕೂಡಲೇ ಕಲಾವಿದರ ಬಾಕಿ ಹಣವನ್ನು ಪಾವತಿಸುವಂತೆ ಆಗ್ರಹಿಸಿದರು.

ಕ್ರಮ ಕೈಗೊಳ್ಳದಿದ್ದರೆ ಬೃಹತ್ ತಮಟೆ ಚಳುವಳಿಯನ್ನ ಮಾಡಲಾಗುವುದೆಂದರು.

ಹಿರಿಯ ಕಲಾವಿದ ಅಗ್ನಿ ಅಸ್ತ್ರ ಅಂಜನಪ್ಪ ಮಾತನಾಡಿ ಕಾರಣವಿಲ್ಲದೆ ನಿಲ್ಲಿಸಿದ ವಿಶೇಷ ಘಟಕದ ಅನೇಕ ಯೋಜನೆಗಳನ್ನು ಪುನಃ ಪ್ರಾರಂಭಿಸಿ ದಲಿತ ಜನಪದ ಕಲಾವಿದರಿಗೆ ಹೆಚ್ಚಿನ ಪ್ರೋತ್ಸಾಹ ನೀಡುವುದರ ಜೊತೆಗೆ ಧನಸಹಾಯ ನೀಡುವಿಕೆಯಲ್ಲಿ ಜಿಲ್ಲಾ ಹಂತದಲ್ಲಿ ನಡೆಯುವ ಭ್ರಷ್ಟಾಚಾರವನ್ನು ಹೋಗಲಾಡಿಸಬೇಕೆಂದರು.

ಹಿರಿಯಜನಪದಗಾಯಕಸಬ್ಬನಹಳ್ಳಿರಾಜು ಅವರು ಕೇಂದ್ರ ಕಚೇರಿಯಲ್ಲಿ ನಡೆಯುವ ಭ್ರಷ್ಟಾಚಾರದಬಗ್ಗೆಮಾತನಾಡುತ್ತಾಹಿರಿಯ ಅಧಿಕಾರಿಗಳನ್ನು ಕೂಡಲೇ ಬೇರೆ ಬೇರೆ ಕಡೆ ವರ್ಗಾಯಿಸಬೇಕು.

ಜನಪದಜಾತ್ರೆಮಹಿಳಾಉತ್ಸವಗಳನ್ನಪುನಃ ಪ್ರಾರಂಭಿಸಬೇಕೆಂದು ಒತ್ತಾಯಿಸಿದರು.

ಈ ಪ್ರತಿಭಟನೆಯನ್ನು ಸಂಘಟಿಸಿದ್ದ ಜಯಸಿಂಹ ಅವರು ಮಾತನಾಡುತ್ತಾ 2017 ರಿಂದಇಲಾಖೆಇಲಾಖೆಯಿಂದಪ್ರಯಾಜಿಸಿದ ಕಲಾತಂಡಗಳ ಪ್ರಯೋಜನೆ ಹಣವನ್ನು ಕೂಡಲೇ ನೀಡಬೇಕು ಸಂಘ ಸಂಸ್ಥೆಗಳಿಗೆ ನೀಡುವ ಧನಸಹಾಯ ಯೋಜನೆಯಲ್ಲಿ ಅಧಿಕಾರಿಗಳು ನಡೆಸುವ ಭ್ರಷ್ಟಾಚಾರಕ್ಕೇ ಕಡಿವಾಣ ಹಾಕಬೇಕು ಎಂದರು.

ಪ್ರತಿಭಟನೆಯ ನೇತೃತ್ವವಿಸಿದ್ದ ಚಿಕ್ಕೆರೆ ಲೋಕೇಶ್ ಅವರು ಇಲಾಖೆಯ ಸಚಿವರು ಅಧಿಕಾರಿಗಳ ಮಾತನ್ನು ಕೇಳಿ ಕಲಾವಿದರಿಗೆ ಯೋಜನೆಗಳು ಸಮರ್ಪಕವಾಗಿ ದೊರೆಯದಂತೆಮಾಡುತ್ತಿದ್ದಾರೆಎಂದುಆರೋಪಿಸಿ ಸಂಘ ಸಂಸ್ಥೆಗಳ ಧನಸಾಯವನ್ನ ಕಡಿಮೆ ಎಂದರೆ ಮೂರು ಲಕ್ಷಕ್ಕೆ ಮಿತಿಗೊಳಿಸಬೇಕು ಸೇವಾಸಿಂದುವಿನಲ್ಲಿ ಅರ್ಜಿ ಹಾಕುವ ಸಂಘ ಸಂಸ್ಥೆಗಳಿಗೆ ಜಿಲ್ಲೆಯ ಸಹಾಯಕ ನಿರ್ದೇಶಕರು ಹಾಗೂ ವಲಯ ಜಂಟಿ ನಿರ್ದೇಶಕರು ನಡೆಸುವ ಭ್ರಷ್ಟಾಚಾರಕ್ಕೆ ಕಡ್ಡಾಯವಾಗಿ ಕಡಿಯೋಣ ಹಾಕಬೇಕು ಎಂದರು.

ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಕಲ್ಬುರ್ಗಿ ಜಿಲ್ಲೆಯ ಕನ್ನಡಪರ ಹೋರಾಟಗಾರ ಶರಣು ಗದ್ದಿಗೆಸುದ್ದಿಗಾರರೊಂದಿಗೆಮಾತನಾಡುತ್ತಾ ಇಲಾಖೆ ದನ ಸಹಾಯ ನೀಡುವಿಕೆಯಲ್ಲಿ ಕಲ್ಯಾಣ ಕರ್ನಾಟಕವನ್ನ ನಿರ್ಲಕ್ಷಿಸುತ್ತದೆ ಆ ಭಾಗದ ಸಂಘದ ಸಂಸ್ಥೆಗಳಿಗೆ ಹೆಚ್ಚಿನ ಅನುದಾನ ನೀಡುತ್ತಿಲ್ಲ ಇದು ಖಂಡನೀಯ ಸಚಿವರು ಕೂಡಲೇ ಈ ಕುರಿತು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಮುಂಬರುವ ದಿನಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಲಾವದರ ನಿರ್ಲಕ್ಷವನ್ನು ಖಂಡಿಸಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದೆಂದರು.

ಕೊಪ್ಪಳ ಜಿಲ್ಲೆಯ ಮಹೇಶ್ ಬಾಬು ಸುರುವೇ ಅವರು ಸಚಿವರ ಜಿಲ್ಲೆಯಲ್ಲಿ ಧನ ಸಹಾಯ ಹಂಚಿಕೆಯಲ್ಲಿ ಭ್ರಷ್ಟಾಚಾರ ನಡೆದಿದೆ. ದನ ಸಹಾಯ ಆಯ್ಕೆ ಸಮಿತಿಯ ಹೆಸರಿನಲ್ಲಿ ಪಾರದರ್ಶಕತೆನಡೆಸಿಲ್ಲಸಂಘ–ಸಂಸ್ಥೆಗಳಿಗೆ ಎಷ್ಟೆಷ್ಟು ಹಣ ನೀಡಬೇಕೆಂಬ ಬಗ್ಗೆ ಕೂಡ ಸಮಿತಿಯ ಸದಸ್ಯರೊಂದಿಗೆ ಚರ್ಚಿಸದೆ ಅಧಿಕಾರಿಗಳು ತಮ್ಮ ಹಂತದಲ್ಲಿ ನಿರ್ಣಯಿಸಿ ಆಯ್ಕೆ ಆಯ್ಕೆ ಸಮಿತಿಯ ಸಹಿ ಪಡೆದಿದ್ದಾರೆ ಎಂದು ಆರೋಪಿಸಿದರು.

ಕಲಬುರ್ಗಿ ವಲಯ ಜಂಟಿ ನಿರ್ದೇಶಕ ಹಾಗೂಕೊಪ್ಪಳದಸಹಾಯಕನಿರ್ದೇಶಕರು ತಮಗೆಬೇಕಾದಸಂಘ–ಸಂಸ್ಥೆಗಳಿಗೆ4ಮತ್ತು ಮೂರುವರೆ ಲಕ್ಷ ನೀಡಿದ ಸಂಘ ಸಂಸ್ಥೆಗಳ ಕಾರ್ಯಕ್ರಮಗಳಮಾಹಿತಿಯನ್ನುಪ್ರದರ್ಶಿಸಿ ಅಧಿಕಾರಿಗಳ ಭ್ರಷ್ಟಾಚಾರಕ್ಕೇ ಕಡಿವಾಣ ಹಾಕಿ ಪ್ರಾಮಾಣಿಕ ಸಂಘ ಸಂಸ್ಥೆಗಳಿಗೆ ಕಡೆ ಕಡಿಮೆ ಹಣ ನೀಡಿರುವುದನ್ನು ಖಂಡಿಸಿದರು

* ಮೂರು ತಾಸಿನ ಕಾರ್ಯಕ್ರಮ ಮಾಡಿದವರಿಗೆ ನಾಲ್ಕು ಲಕ್ಷ...

*ಮೂರುದಿನಕಾರ್ಯಕ್ರಮಮಾಡಿದವರಿಗೆ ಒಂದು ಲಕ್ಷ ನೀಡಿದ ಭ್ರಷ್ಟಾಚಾರದ ಒಂದು ನಿದರ್ಶನವನ್ನು ಮಾಹಿತಿ ಹಕ್ಕಿನಲ್ಲಿ ಪಡೆದ ದಾಖಲೆ ಸಮೇತ ವಿವರಿಸಿದರು. ಈ ಕುರಿತು ನಿರ್ದೇಶಕರಿಗೆ ಕಾರ್ಯದರ್ಶಿಗಳಿಗೆ ಸಚಿವರಿಗೆ ಹಾಗೂ ಲೋಕಾಯುಕ್ತರಿಗೆ ದೂರು ದಾಖಲೆ ಮಾಡುತ್ತೇನೆ ಎಂದರು.

ಬೆಳಗಾವಿಯ ಸುರೇಶ್ ವಾಗ್ಮೊರೆಯವರು ಧನಸಾಯ ನೀಡುವಿಕೆಯಲ್ಲಿ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿರಾಜ್ಯದವಿವಿಧಜಿಲ್ಲೆಗಳಿಂದ ಕಲಾವಿದರು ಭಾಗವಹಿಸಿ ತಮ್ಮ ಬೇಡಿಕೆಗಾಗಿ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಭೂಮಿಪುತ್ರ ರಾಜೇಗೌಡ ಚಿಕ್ಕೆರೆ ಲೋಕೇಶ್ ಗುಬ್ಬಿ ವೀರೇಶ್ ರಾಯಪ್ಪ ಬೆಳಗಾವಿ ರಾಜೇಗೌಡ ಹುಲಿಬೆಲೆ ಸಿದ್ದರಾಜುಯ್ಯಸಾಹಿತಿಭೂಹಳ್ಳಿಪುಟ್ಟಸ್ವಾಮಿ ರಾಂಪುರ ಸಿದ್ದರಾಜು ಹೊನಿಗಾನಹಳ್ಳಿ ಸಿದ್ದರಾಜಯ್ಯ ಬಿ.ಪಿ.ಸುರೇಶ್ ಹೊಂಬಾಳಯ್ಯ ಏಕತಾರಿ ರಾಮಯ್ಯ ಕುಣಿಗಲ್ ರಾಮಚಂದ್ರ ಕೊಡಗಿನ ಸತ್ಯ ಪ್ರಕಾಶ್ ಬೆಳಗಾವಿಯ ನಾಗೇಂದ್ರ ಮಳವಳ್ಳಿ ಮೂರಿ ಗಾಲಿ ಮಹದೇವಸ್ವಾಮಿ ಪುಟ್ಟಸ್ವಾಮಿ ನಮನ ಶಿವಕುಮಾರ್ ಸಂತ ವಾಣಿ ಸುಧಾಕರ್ ಸವಿಗಾನ ಮಂಜು ಮಾಗಡಿ ಕೃಷ್ಣಪ್ಪ ಪುಟ್ಟರಾಜು ಕುಂತೂರು ದೊಡ್ಡಿ ಸಿದ್ದರಾಮು ಕೂಡ್ಲೂರು ಕೊಳತ್ತೂರು ಮಹದೇವಸ್ವಾಮಿ ಕಾಳಯ್ಯ ಕನಕಪುರ ಪುಟ್ಟಸ್ವಾಮಿ ಪ್ರದೀಪ್ ಮಂಜು ದರ್ಪಣ ಶ್ರೀನಿವಾಸ್ ಕಿರುಗುಂದ ಮಹಾದೇವ್ ಟಿ ನರಸೀಪುರ ಸಾಗರ್ ಮೈಸೂರು ಚಿಕ್ಕರಾಜು ರಾಂಬೊ ಸುರೇಶ್ ದಿವಾಕರ್ ಮೀನಾಕ್ಷಿ ರೋಜ್ ಮೇರಿ ಗೋವಿಂದಳ್ಳಿ ನಾಗರಾಜು ಗಂಗನರಸಯ್ಯ ಮಹೇಶ್ ಡಿಕೆ ಬನಶಂಕರಿ ನಾಗು ದೇವರಾಜು ಎಚ್ ಡಿ ಕೋಟೆ ರಾಘವೇಂದ್ರ ಗಣೇಶ್ ರಾಕೇಶ್ ಕಾಂಬಳೆ ತಸ್ಮಿಯಾ ಗೋಪಾಲ್ ಮರಿಸ್ವಾಮಿ ಸರಗೂರು ಲಕ್ಷ್ಮಿ ನಾರಾಯಣ ಬಧನಾಳು ಮೆಣಸಿಗನಹಳ್ಳಿ ಸ್ವಾಮಿ ಚಂದ್ರಶೇಖರ್ ರಾಘು ಶಾರದಾ ಧನಲಕ್ಷ್ಮೀ ಇತರರು ಭಾಗವಹಿಸಿದ್ದರು.

**ಪ್ರತಿಭಟನೆಯನಿರತಕಲಾವಿದರುಒತ್ತಾಯಗಳು:**

* ವಿಶೇಷ ಘಟಕದ ನಿಲ್ಲಿಸಿರುವ ಯೋಜನೆಗಳನ್ನು ಪುನಃ ಪ್ರಾರಂಭಿಸಿ

* ಇಲಾಖೆ ಪ್ರಾಯೋಜಿಸಿದ 2017 ಬಾಕಿ ಇರುವ ಹಣವನ್ನು ಪಾವತಿ

* ಕೂಡಲೇ ಧನಸಾಯದ 60% ಹಾಗೂ 70% ಹಣವನ್ನು ಬಿಡುಗಡೆ ಮಾಡಿ

*ಜಾನಪದ ಜಾತ್ರೆಯನ್ನು ಪುನಃ ಪ್ರಾರಂಭಿಸಿ

* ಬೆಂಗಳೂರು ಹಬ್ಬದ ತನಿಖೆಯನ್ನು ಎಸ್ಐಟಿಗೆ ವಹಿಸಿ

* ಧನಸಾಯ ಹಂಚಿಕೆಯಲ್ಲಿ ನಡೆಯುವ ಭ್ರಷ್ಟಾಚಾರವನ್ನು ತಡೆಗಟ್ಟಿ

* ಸೇವಾ ಸಿಂಧೂರಿನಲ್ಲಿ ಮೂಲಕ ಬರುವ ದಾಸಾಯಕ್ಕೆ ಒಂದು ನ್ಯಾಯಗಳ ಶಿಫಾರಸು ಮೂಲದವರು ನನಸಾಗಿ ಒಂದು ನ್ಯಾಯ ಸರೀನಾ

* ಸುಗ್ಗಿ ಹುಗ್ಗಿ ಮಹಿಳಾ ಉತ್ಸವ ಯೋಜನೆಗಳನ್ನು ಪುನಃ ಪ್ರಾರಂಭಿಸಿ

* ಬೆಂಗಳೂರಿನಲ್ಲಿ ಬಿಡು ಬಿಟ್ಟಿರುವ ಅಧಿಕಾರಿಗಳನ್ನು ವರ್ಗಾಯಿಸಿ

* ದೂರುಗಳಿರುವ ಜಂಟಿ ನಿರ್ದೇಶಕರನ್ನ ಬೆಂಗಳೂರಿನಿಂದ ವರ್ಗಾಯಿಸುವುದು

* ಕಲ್ಯಾಣ ಕರ್ನಾಟಕದ ಸಂಘ ಸಂಸ್ಥೆಗಳ ಕಾರ್ಯಕ್ರಮಗಳಿಗೆ ಹೆಚ್ಚಿನ ಅನುದಾನ ನೀಡುವುದು ಮತ್ತು ಅಧಿಕಾರಿಗಳು ಪಾರದರ್ಶಿಕವಾಗಿ ಕೆಲಸ ನಿರ್ವಹಿಸುವಂತೆ ಕ್ರಮವಹಿಸುವುದು

* ದನ ಸಹಾಯ ಹಂಚಿಕೆಯಲ್ಲಿ ಭ್ರಷ್ಟಾಚಾರ ಸಿಕ್ಕಿದೂರುದಾಖಲಾದಜಂಟಿನಿರ್ದೇಶಕರು ಮತ್ತು ಸಹಾಯಕ ನಿರ್ದೇಶಕರನ್ನ ತನಿಖೆಗೆ ಒಳಪಡಿಸಿ ಅಮಾನತುಗೊಳಿಸುವುದು

* ಮಾಹಿತಿ ಕಾಯ್ದೆ ಹಕ್ಕಿನ ನಿರ್ಲಕ್ಷ ತೋರುಸ್ತಿರುವ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ

*ವಿಶೇಷಘಟಕದಹೊರನಾಡುಉತ್ಸವವನ್ನು ಪ್ರಾರಂಭಿಸಿ

* ದನ ಸಹಾಯದ ಕನಿಷ್ಠ ಮೊತ್ತವನ್ನ 3 ಲಕ್ಷ .ಗರಿಷ್ಠ 10 ಲಕ್ಷ ಸೀಮಿತಗೊಳಿಸಿ ಸಾಮಾಜಿಕ ನ್ಯಾಯ ನೀಡಲು ಒತ್ತಾಯ.

# ಹಿಪ್ಪರಗಿ ಬ್ಯಾರೇಜ್‌ಗೆ ಒಳ ಹರಿವು ಹೆಚ್ಚಳ



**ರಬಕವಿ–ಬನಹಟ್ಟಿ :** ತಾಲೂಕಿನ ಹಿಪ್ಪರಗಿ ಬ್ಯಾರೇಜ್‌ಗೆ ಗುರುವಾರದಂದು ಕೃಷ್ಣೆಯ ಒಳ ಹರಿವು ಹೆಚ್ಚಳಗೊಂಡಿದ್ದು, ಪ್ರವಾಹದ ಆತಂಕ ದಟ್ಟವಾಗಿದ್ದು, ನದಿ ತಟದ ಜನತೆಗೆ ಗಂಜೀಕೇಂದ್ರ ಇಲ್ಲವೇ ಸುರಕ್ಷಿತ ಸ್ಥಳಕ್ಕೆ ತೆರಳುವಂತೆ ಉಪವಿಭಾಗಾಧಿಕಾರಿ ಶ್ವೇತಾ ಬೀಡಕರ ತಿಳಿಸಿದ್ದಾರೆ.

ರಬಕವಿಯ ಕೃಷ್ಣಾ ತಟದ ರೈತರನ್ನುದ್ದೇಶಿಸಿ ಮಾತನಾಡಿದ ಅವರು, ರಬಕವಿಯ ಶ್ರೀಶಿವದಾಸಿಮಯ್ಯ ಸಮುದಾಯ ಭವನದಲ್ಲಿ ಪ್ರವಾಹಪೀಡಿತರಿಗಾಗಿಆಶ್ರಯಕಲ್ಪಿಸಿದ್ದು,ನದಿತೀರದ ರೈತರು ತಮ್ಮ ಜಾನುವಾರುಗಳನ್ನು ಬನಹಟ್ಟಿಯ ಗುಂಡಯ್ಯನ ಮಠದ ಬಳಿಯ ಗೋಶಾಲೆಗೆ ಬಿಟ್ಟು ಸುರಕ್ಷಿತರಾಗಲು ತಿಳಿಸಿದ್ದಾರೆ.

ಕೃಷ್ಣೆಯ ಒಳಹರಿವಿನ ನೀರಿನ ಮಟ್ಟದಲ್ಲಿ ಇಂದು ಕೂಡ ಹೆಚ್ಚಳವಾಗಿದ್ದು, 1,68,565 ಕ್ಯೂಸೆಕ್ಸ್ ಒಳ ಹರಿವಿದ್ದರೆ ಅಷ್ಟೇ ಪ್ರಮಾಣದ ನೀರನ್ನು ನದಿಗೆ ಬಿಡಲಾಗುತ್ತಿದೆ. ಒಳಹರಿವಿನ ತೀವ್ರತೆ ಗಮನಿಸಿ ಪ್ರವಾಹ ತಡೆಯುವತ್ತ ಆಲಮಟ್ಟಿ ಜಲಾಶಯದಿಂದ ಹೊರಬಿಡುವ ನೀರಿನ ಪ್ರಮಾಣವನ್ನು 2ಲಕ್ಷ 50 ಸಾವಿರ ಕ್ಯುಸೆಕ್ಸ್‌ಗೆ ಹೆಚ್ಚಿಸಲಾಗಿದ್ದು, ಕೃಷ್ಣಾ ಜಲಾನಯನ ಪ್ರದೇಶಗಲ್ಲಿನ ತೀವ್ರವಾಗಿರುವ ಮಳೆ ಮತ್ತು ಮಹಾರಾಷ್ಟ್ರದ ಜಲಾಶಯಗಳಿಂದ ಹೊರಬಿಡುತ್ತಿರುವ ನೀರನ್ನು ಲಕ್ಷಿಸಿ ಆಲಮಟ್ಟಿ ಜಲಾಶಯದಿಂದ ಬುಧವಾರಕ್ಕಿಂತ ಗುರುವಾರದಂದು 20,177 ಕ್ಯೂಸೆಕ್ಸ್ ನೀರನ್ನು ಹೆಚ್ಚುವರಿಯಾಗಿ ಹೊರಬಿಡಲಾಗುತ್ತಿದೆ ಎಂದು ಜಮಖಂಡಿ ಎಸಿ ಶ್ವೇತಾ ಬೀಡಕರ ತಿಳಿಸಿದ್ದಾರೆ.

# ಇನ್ನರ್ ವೀಲ್ ಕ್ಲಬ್‌ದಿಂದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ



**ಕೊಪ್ಪಳ :** ತಾಲೂಕಿನ ಹಳೆಗೊಂಡುಬಾಳ ಗ್ರಾಮದ ಶ್ರೀ ಅನ್ನದಾನೇಶ್ವರ ಪ್ರೌಢ ಶಾಲೆಯ ವಿದ್ಯಾರ್ಥಿಗಳಿಗೆ ಏರ್ಪಡಿಸಿದ ವಿವಿಧ ಸ್ಪರ್ಧೆಗಳಲ್ಲಿ ವಿಜೇತಗೊಂಡ ವಿದ್ಯಾರ್ಥಿಗಳಿಗೆ ಕೊಪ್ಪಳ ಇನ್ನರ್ ವೀಲ್ ಕ್ಲಬ್ ಹಾಗೂ ಶ್ರೀಗವಿಸಿದ್ದೇಶ್ವರಆಯುರ್ವೇದಿಕ್‌ಕಾಲೇಜ್ ಇವುಗಳ ಸಯುಕ್ತ ಆಶ್ರಯದಲ್ಲಿ ಏರ್ಪಡಿಸಿದ ಸಮಾರಂಭ ದಲ್ಲಿ ಬಹುಮಾನ ವಿತರಿಸಲಾಯಿತು

ಕೊಪ್ಪಳ ಇನ್ನರ್ವೀಲ್ ಕ್ಲಬ್ ಅಧ್ಯಕ್ಷರಾದ ಉಮಾ ಮಹೇಶ್ ತಂಬ್ರಳ್ಳಿ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿ ಕ್ಲಬ್ ಪರವಾಗಿ ಸುಮಾರು 50 ಜನ ವಿಜೇತ ವಿದ್ಯಾರ್ಥಿಗಳಿಗೆ ಸ್ಟೀಲ್ ಬಾಕ್ಸ್ ವಿತರಣೆ ಮಾಡಿ ಪ್ರೋತ್ಸಾಹಿಸಿದರು

ಶಾಲಾ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ರಂಗೋಲಿ ಚಿತ್ರಕಲೆ ಗಾಯನ ಮತ್ತು ಭಾಷಣ ಸ್ಪರ್ಧೆ ಸೇರಿದಂತೆ ವಿವಿಧ ಸ್ಪರ್ಧೆಗಳನ್ನು ಆರನೇ ತರಗತಿ ಇಂದ 10ನೇ ತರಗತಿವರೆಗಿನ ಸುಮಾರು 50 ಜನ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿದರು ನಂತರ ಮಾತನಾಡಿದವರು ವಿದ್ಯಾರ್ಥಿಗಳು ಸ್ಪರ್ಧಾ ಮನೋಭಾವನೆ ಬೆಳೆಸಿಕೊಳ್ಳಬೇಕು ಸ್ಪರ್ಧೆಗಳಲ್ಲಿ ಭಾಗ ವಹಿಸಬೇಕು ಎಂದು ಕೊಪ್ಪಳ ಈ ನರ್ವಿಲ್ ಕ್ಲಬ್ ಅಧ್ಯಕ್ಷರಾದ ಉಮಾ ಮಹೇಶ್ ತಂಬ್ರಳ್ಳಿ ಸಲಹೆ ನೀಡಿದರು.

ಚಿತ್ರಕಲೆ ಸ್ಪರ್ಧೆಯಲ್ಲಿ ತೇಜಸ್ವಿನಿ ಪ್ರಥಮ ಭುವನೇಶ್ವರಿ ಎರಡನೇ ಮುರಳಿ ತೃತೀಯ ಬಹುಮಾನ ಪಡೆದುಕೊಂಡರು, ರಸಪ್ರಶ್ನೆಯಲ್ಲಿ ಚರಕ ತಂಡ ಪ್ರಥಮ ಮತ್ತು ವಾಗ್ ಬಠ ತಂಡ ದ್ವಿತೀಯ ಬಹುಮಾನ ಪಡೆದರೆ, ಭಾಷಣ ಸ್ಪರ್ಧೆಯಲ್ಲಿ ನೇತ್ರ ಹೂಗಾರ್ ಪ್ರಥಮ ಕವನ ಎರಡನೇ ಬಹುಮಾನ ಹಾಗೂ ಪ್ರಬಂಧ ಸ್ಪರ್ಧೆಯಲ್ಲಿ ಭುವನೇಶ್ವರಿ ಪ್ರಥಮ ಗಗನ ಇಂದರಗಿ ಎರಡನೇ ಬಹುಮಾನ ಮತ್ತು ಗಾಯನ ಸ್ಪರ್ಧೆಯಲ್ಲಿ ಭುವನೇಶ್ವರಿ ತಂಡ ಮತ್ತು ರೇಣುಕ ತಂಡ ಸ್ಪರ್ಧೆ ಮಾಡಿ ಬಹುಮಾನ ಪಡೆದುಕೊಂಡರು. ಸಮಾರಂಭದಲ್ಲಿ ಕೊಪ್ಪಳ ಇನ್ನರ್ವಿಲ್ ಕ್ಲಬ್ ಕಾರ್ಯದರ್ಶಿ ಮೀನಾಕ್ಷಿ ಬಣ್ಣದ ಬಾವಿ ಉಪಾಧ್ಯಕ್ಷರಾದ ಮಧು ಶೆಟ್ಟರ್ ಎಡಿಟರ್ ನಾಗವೇಣಿ ಸೇರಿದಂತೆ ಶಾಲೆಯ ಮುಖ್ಯೋಪಾಧ್ಯಾಯರು ಸಹಶಿಕ್ಷಕರು ವಿದ್ಯಾರ್ಥಿಗಳು ವಿದ್ಯಾರ್ಥಿಗಳ ಪಾಲಕರು ಪಾಲ್ಗೊಂಡಿದ್ದರು.

# ಕನ್ನಡ ಭಾಷಾಭಿಮಾನಿ ಶಿಕ್ಷಕರಿಗೆ ಕನ್ನಡ ಕಣ್ಮಣಿ ಪ್ರಶಸ್ತಿ



**ಜಮಖಂಡಿ :** ಕನ್ನಡ ಭಾಷೆಗೆ ದುಡಿಯುತ್ತಿರುವ ಶಿಕ್ಷಕರಿಗೆ ಗೌರವಿಸಲು ನಿರ್ಧರಿಸಲಾಗಿದ್ದು, ಜುಲೈ 28ರಂದು ನಗರದ ಗಂಗೋತ್ರಿ ಶಾಲೆಯಲ್ಲಿ ಉಪವಿಭಾಗಮಟ್ಟದ ಪ್ರೌಢಶಾಲಾಪ್ರತಿಭಾನ್ವಿತಕನ್ನಡಭಾಷಾ ಬೋಧಕರಿಗೆ ಕನ್ನಡ ಕಣ್ಮಣಿ ಪ್ರಶಸ್ತಿ ಪ್ರದಾನ ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಲಿದೆ ಎಂದು ಸಂಯೋಜಕ, ವಿಶ್ರಾಂತ ಪ್ರಾಚಾರ್ಯ ಸಂಗಮೇಶ ಮಟೋಳಿ ಹೇಳಿದರು.

ನಗರದ ರಮಾನಿವಾಸ ಸಭಾಭವನದಲ್ಲಿ ಪ್ರಚಾರ ಸಾಮಗ್ರಿ ಬಿಡುಗಡೆಗೊಳಿಸಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವೀರೇಶ್ವರ ಪ್ರಕಾಶನ, ಸಾಹಿತ್ಯ ಸೌರಭ ವೇದಿಕೆ, ಕನ್ನಡ ಸಾಹಿತ್ಯ ಪರಿಷತ್ತು, ಜ್ಞಾನ ಗಂಗೋತ್ರಿ ಶಿಕ್ಷಣ ಸಂಸ್ಥೆ ಸಹಯೋಗದಲ್ಲಿ ಸತತ 3ನೇ ವರ್ಷದಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಜಮಖಂಡಿ, ಮುಧೋಳ ಮತ್ತು ರಬಕವಿ–ಬನಹಟ್ಟಿ ತಾಲೂಕಿನಲ್ಲಿರುವ ಕನ್ನಡ ಭಾಷಾ ಬೋಧಕರನ್ನು ಗುರುತಿಸಿ ಗೌರವಿಸುವ ನಿಟ್ಟಿನಲ್ಲಿ ಅಂದಾಜು 90 ಕ್ಕೂ ಅಧಿಕ ಕನ್ನಡಭಾಷಾ ಶಿಕ್ಷಕರನ್ನು ಸನ್ಮಾನಿಸಲಾಗುತ್ತದೆ ಎಂದರು. ಸಹಾಯಕ ಪ್ರಾಧ್ಯಾಪಕ ರಾಜಶೇಖರ ಹೊಸಟ್ಟಿ ಮಾತನಾಡಿ, ನಗರದ ಜ್ಞಾನ ಗಂಗೋತ್ರಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಜುಲೈ 28ರಂದು ಬೆಳಿಗ್ಗೆ 9.30 ಗಂಟೆಗೆ ಜರುಗಲಿದ್ದು, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಅಧ್ಯಕ್ಷತೆ ವಹಿಸುವರು. ಸಾ.ಶಿ.ಇಲಾಖೆ ವಿಶ್ರಾಂತ ನಿರ್ದೇಶಕ ಉದ್ಘಾಟಕರಾಗಿ ಸಿದ್ಧರಾಮ ಮನಹಳ್ಳಿ ಕಾರ್ಯಕ್ರಮಉದ್ಘಾಟಿಸುವರು.ಮುಖ್ಯಅತಿಥಿಗಳಾಗಿ ಎ.ಕೆ.ಬಸಣ್ಣವರ ಕ್ಷೇತ್ರ ಶಿಕ್ಷಣಾಧಿಕಾರಿ ಸಹಿತ ಹಲವರು ಭಾಗವಹಿಸಲಿದ್ದಾರೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಬಾಹುಬಲಿ ಬಿರಾದಾರ, ಬಿ.ಎನ್.ಅಸ್ಕಿ ಇದ್ದರು.

# ಅಂತರರಾಜ್ಯ ಕಳ್ಳರ ಬಂಧನ 10ಲಕ್ಷ ಮೌಲ್ಯದ ವಾಹನ ಜಪ್ತಿ



**ಜಮಖಂಡಿ :** ತಾಲೂಕಿನ ಕೊಣ್ಣೂರ ಗ್ರಾಮ ದ್ವಿಚಕ್ರ ವಾಹನ ಕಳ್ಳತನ ತನಿಖೆ ಸಂದರ್ಭದಲ್ಲಿ ಸಂಶಯಾಸ್ಪದವಾಗಿಸಂಚರಿಸುತ್ತಿದ್ದಆರೋಪಿಗಳನ್ನು ತನಿಖೆ ಮಾಡಿದ ಸಂದರ್ಭದಲ್ಲಿ ಅಂತರಾಜ್ಯರ ಕಳ್ಳರ ಬಂಧನ ಮಾಡಲಾಗಿದೆ ಎಂದು ಡಿವೈಎಸ್‌ಪಿ. ಈ.ಶಾಂತವೀರ ಹೇಳಿದರು.

ನಗರದ ಗ್ರಾಮೀಣ ಠಾಣೆಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಾಜು 10 ಲಕ್ಷ ಮೌಲ್ಯದ 10 ದ್ವಿಚಕ್ರ ವಾಹನ ಮತ್ತು 2 ಟ್ರ್ಯಾಕ್ಟರ್ ಟೇಲರಗಳನ್ನು ವಶಕ್ಕೆ ಪಡೆದುಕೊಂಡು ಆರೋಪಿಗಳ ಬಂಧನ ಮಾಡಲಾಗಿದೆ. ಕೊಣ್ಣೂರಿನ ಕಳುವಿನ ಪ್ರಕರಣತನಿಖೆ ಮುಂದುವರೆಸಿದಾಗ ಸಂಶಯಾಸ್ಪದವಾಗಿದ್ವಿಚಕ್ರವಾಹನದಮೇಲೆಬರುತ್ತಿದ್ದ 3ಆರೋಪಿಗಳನ್ನುವಿಚಾರಣೆಗೆಒಳಪಡಿಸಿದಾಗನಾವು ಹಳೇ ಮೋಟಾರ ಸೈಕಲ ವಿನಿಮಯ ಏಜೆನ್ಸಿಯಿದೆ ಎಂದು ಸುಳ್ಳು ಹೇಳಿ ಅರ್ಧ ಬೆಲೆಗೆ ಮಾರಾಟ ಮಾಡಿ ಉಳಿದ ಅರ್ದ ಬೆಲೆಯನ್ನು ಕಾಗದ ಪತ್ರ ತಯಾರಿಸಿ ಕೊಟ್ಟ ನಂತರ ಕೊಡುವ ಕರಾರಿನ ಮೇಲೆ ಮಾರಾಟ ಮಾಡಿ ಬಂದ ಹಣವನ್ನು ಸಮನಾಗಿ ಹಂಚಿಕೊಳ್ಳುವ ಯೋಜನೆ ರೂಪಿಸಿಕೊಂಡಿದ್ದರು. ಕೊಣ್ಣೂರ ಗ್ರಾಮವಲ್ಲದೇ ಬೆಳಗಾವಿ ಜಿಲ್ಲೆಯ ಮಸಗುಪ್ಪಿ, ಗುಣದಾಳ, ಖಿಳೇಗಾವಿ, ಕಾಗವಾಡ, ನಂದಿ ಸುಗರ್ಸ ಕೋಹಳ್ಳಿಚಿಂಚಲಿ,ಮಹಾರಾಷ್ಟ್ರದಜತ್ತ,ಬಿಳ್ಳೂರದಲ್ಲಿ ಕಳ್ಳತನ ಮಾಡಿದ್ದ 4.50 ಲಕ್ಷ ಮೊತ್ತದ 10 ದ್ವಿಚಕ್ರ ವಾಹನ ಮತ್ತು 5 ಲಕ್ಷ ಮೊತ್ತದ ಎರಡು ಟ್ರ್ಯಾಕ್ಟರ ಟ್ರೇಲರ ಗಳನ್ನುವಶಕ್ಕೆಪಡೆದುಮೂವರುಆರೋಪಿಗಳಮೇಲೆ ಪ್ರಕರಣ ದಾಖಲಿಸಿ ನ್ಯಾಯಾಂಗ ವಶಕ್ಕೆ ನೀಡಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಿಪಿಐ ಮಲ್ಲಪ್ಪ ಮಡ್ಡಿ, ಪಿಎಸ್‌ಐ ಮಹೇಶಸಂಖ,ಅಪರಾಧವಿಭಾಗದಪಿ.ಎಸ್.ಐಹೆಚ್. ಎಂ. ಹೊಸಮನಿ. ಎ.ಎಸ್.ಐ ಬಿ.ಎಸ್.ಬಿರಾದಾರ ಬಿ.ಪಿ.ಕುಸನಾಳೆ,ಬಿ.ಎಂ.ಜಂಬಗಿ,ಎಸ್.ಎಸ್.ಮೇಟಿ, ಬಿ.ಎಸ್.ಮಾಳಿ, ಬಿ.ಬಿ.ವನಜೋಳ, ಸಿ.ಐ.ಪರೀಟ, ಎಸ್.ಎಸ್.ತುಪ್ಪದ, ಬಿ.ವೈ.ಪೆತೂನವರ, ಟಿ.ಆರ್. ಕೇಲೂಡಿ, ಎಲ್.ಎಸ್.ಲಾಯನ್ನವರ, ವಿ.ಎಸ್ ಜಾಧವ, ಮುತ್ತು ತಮದಡ್ಡಿ ಇದ್ದರು.

# ಕಾಯಕರತ್ನ–ಆದ್ಯವಚನಕಾರ ದಾಸಿಮಯ್ಯ: ಡಾ. ಆಯ್.ಎನ್.ಹುರಳಿ
## ಮನೆ ಮನಗಳಲ್ಲಿ ದಾಸಿಮಯ್ಯ–ಚಿಂತನ ಗೋಷ್ಠಿ–23ರಲ್ಲಿ ವಿಚಾರ ಮಂಡನೆ



**–ಕೆ.ಎಚ್. ಸೋಲಾಪೂರ**

**ಇಳಕಲ್ಲ :** ತಾಲ್ಲೂಕು ದೇವಾಂಗ ನೌಕರರ ಸಂಘದ ಸಹಯೋಗದಲ್ಲಿ ಇಂದು ಸಂಜೆ ಡಾಃನಾರಾಯಣ ವನಕಿ ನಿವಾಸದಲ್ಲಿ ಮನೆ ಮನಗಳಲ್ಲಿ ದಾಸಿಮಯ್ಯ ಚಿಂತನಗೋಷ್ಠಿ–23 ರಲ್ಲಿ ಆದ್ಯವಚನಕಾರ ದಾಸಿಮಯ್ಯರು ತಮ್ಮ ಕಾಯಕದೊಂದಿಗೆ ಸಮಾಜದ ಅಂಕುಡೊಂಕುಗಳನ್ನು ತಮ್ಮ ವಚನಗಳ ಮೂಲಕ ತಿದ್ದಿದ ಮಹಾನ್ ದಾರ್ಶನಿಕ ಎಂದು ಉಪನ್ಯಾಸಕ ಡಾಃ ಆಯ್.ಎನ್. ಹುರಳಿ ಅಭಿಪ್ರಾಯ ಪಟ್ಟರು. ಅವರ ವಚನಗಳು ಇಂದಿಗೂ ಕೂಡ ಪ್ರಸ್ತುತವಾಗಿದ್ದು ನಮ್ಮ ಮನೆ ಮನಗಳನ್ನು ಬೆಳಗಬೇಕು ಎಂದು ಹೇಳಿದರು. ನೌಕರ ಸಂಘದವರು ದಾಸಿಮಯ್ಯನವರ ವಚನಗಳನ್ನು ಮನೆ ಮನೆಗಳಿಗೆ ತಲುಪಿಸುತ್ತಿರುವ ಕಾರ್ಯ ಪ್ರಶಂಸನೀಯ ಎಂದು ಶ್ಲಾಘಿಸಿದರು. ಮುನಿಸ್ವಾಮಿ ದೇವಾಂಗಮಠ ಸಾನಿಧ್ಯ ವಹಿಸಿದ್ದರು. ಡಾ:ನಾರಾಯಣ ವನಕಿ ಅಧ್ಯಕ್ಷತೆಯನ್ನು ವಹಿಸಿದ್ದರು.ಇದೇ ಸಂದರ್ಭದಲ್ಲಿ ಡಾ:ಆಯ್. ಎನ್.ಹುರಳಿಯವರನ್ನು ಸನ್ಮಾನಿಸಲಾಯಿತು. ಪ್ರವಚನಕಾರ ಶಿವಶಂಕರ ಮೆದಿಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು.ಜಗದೀಶ ಅರಳಿಕಟ್ಟಿ ಸ್ವಾಗತಿಸಿದರು. ವಿಷ್ಣು ಚಳಗೇರಿ ಪ್ರಾರ್ಥಿಸಿದರು.ತಿಪ್ಪಣ್ಣ ಚಿತ್ತರಗಿ ವಂದಿಸಿದರು. ಮಲ್ಲಿಕಾರ್ಜುನ ಇಂದರಗಿ ನಿರೂಪಿಸಿದರು. ನೌಕರ ಸಂಘದ ಅಧ್ಯಕ್ಷ ನಾರಾಯಣ ಬಿಜ್ಜಲ,ಬಸವರಾಜ ಕಿರಗಿ,ಶಂಕರಗೌಡ ಮುನವಳ್ಳಿ,ಶಂಕರ ಕತ್ರಿ,ಗೋವಿಂದಪ್ಪ ಬಿಜ್ಜಲ,ಶ್ರೀಧರ ಜೋಗಿನ,ಶಿವಾನಂದ ವಂದಾಲ,ಚಂದ್ರು ವನಕಿ,ಪುಲಕೇಶಪ್ಪ ಬಿಜ್ಜಲ,ಅಮರೇಶ ಉಳ್ಳಿ ಗಂಗಣ್ಣ ಬಡಿಗೇರ,ಕಿರಣ ಬಿಜ್ಜಲ,ಅಶೋಕ ತೆಳಗಡೆ ಲಲಿತಾ ಬಳಗದ ತಾಯಂದಿರು ಸಮಾಜ ಬಾಂಧವರು ಹಾಗೂ ವನಕಿ ಪರಿವಾರದ ಸದಸ್ಯರು, ಇಲಕಲ್ಲ ತಾಲ್ಲೂಕು ದೇವಾಂಗ ನೌಕರ ಸಂಘದ ಸದಸ್ಯರು, ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ವಿಷಯ ನಿರ್ವಾಹಕ ಲೋಕಾಯುಕ್ತ ಬಲೆಗೆ

**ಬಾಗಲಕೋಟೆ :** ಬಾಗಲಕೋಟೆ ಕ್ಷೇತ್ರಶಿಕ್ಷಣಾಧಿಕಾರಿಗಳಕಚೇರಿಯ ವಿಷಯ ನಿರ್ವಾಹಕ ಪ್ರಕಾಶ ಅಂಗಡಿ ಲಂಚ ಸ್ವೀಕರಿಸುವ ವೇಳೆ ಲೋಕಾಯುಕ್ತರ ಬಲೆ ಸಿಕ್ಕಿಬಿದ್ದಿದ್ದಾರೆ. ಸದರ ವ್ಯಕ್ತಿಯು ಮಹಾದೇವಪ್ಪ ಸಣ್ಣದೇವರ ನಿವೃತ್ತಿಯ ನಂತರ ಬಾಕಿ ಇರುವ ಗಳಿಕೆ ರಜೆ ನಗದೀಕರಣ ಮಾಡಿಕೊಡಲು 7 ಸಾವಿರ ರೂ. ಗಳ ಬೇಡಿಕೆ ಇಟ್ಟಿದ್ದರು. ಇವರು ಸಲ್ಲಿಸಿದ ದೂರಿನನ್ವಯ ಲಂಚದ



ಹಣ ಸ್ವೀಕರಿಸುವಾಗ ದಾಳಿ ವೇಳೆ ಸಿಕ್ಕಿಬಿದ್ದಿದ್ದಾರೆ.

ಸದರಿ ದಾಳಿಯನ್ನು ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಸತೀಶ ಚಿಟಗುಬ್ಬಿ ಮಾರ್ಗದರ್ಶನ ಹಾಗೂ ಪೊಲೀಸ್ ಉಪಾಧೀಕ್ಷ ಸಿದ್ದೇಶ್ವರ ನೇತೃತ್ವದಲ್ಲಿ ಪೊಲೀಸ್ ನಿರೀಕ್ಷಕ ಬಸವರಾಜ ಮುಕರ್ತಿಹಾಳ ಹಾಗೂ ಸಿಬ್ಬಂದಿಗಳಾದ ಬಸವರಾಜ ದೇಸಾಯಿ, ನಾಗಪ್ಪ ಪೂಜಾರಿ, ಭೀಮನಗೌಡ ಪಾಟೀಲ, ಶಂಕರ ಬಳಬಟ್ಟಿ, ಹನಮಂತ ಹಲಗತ್ತಿ, ಶಿವಾನಂದ ಮುಷ್ಟಿಗೇರಿ, ರಾಮನಗೌಡ ಗಾಡರ,ವಿ.ಜಿ.ರಾಜನಾಳ,ಶಶಿಧರ ಚುಚ್ಯಾಳ, ಮಹೇಶ ಹೊಡಗೌಡ್ರ ದಾಳಿಯಲ್ಲಿ ಪಾಲ್ಗೊಂಡಿದ್ದರು.


# ಕಸಾಪದಿಂದ ದತ್ತಿ ಉಪನ್ಯಾಸ ಶರಣರು ಕಾಯಕದಲ್ಲಿ ದೈವತ್ವ ಕಂಡರು: ಶಿಕ್ಷಕ ಬಿರಾದಾರ ಅಭಿಮತ



**ತಾಳಿಕೋಟಿ :** 12ನೇ ಶತಮಾನದಲ್ಲಿ ಸಾಮಾಜಿಕ ಹಾಗೂ ವೈಚಾರಿಕ ಕ್ರಾಂತಿಯನ್ನು ತಂದ ಬಸವಣ್ಣನವರು ಕಾಯಕದ ಶ್ರೇಷ್ಠತೆಯನ್ನು ಎತ್ತಿ ತೋರಿಸಿ ಅದು ಆರಾಧನೆಗೆ ಸಮಾನವೆಂದು ಪ್ರತಿಪಾದಿಸಿ ಅದಕ್ಕೆ ದೈವತ್ವದ ಸ್ಥಾನ ನೀಡಿದರು ಎಂದು ಶಿಕ್ಷಕ ಸಾಹೇಬಗೌಡ ಬಿರಾದಾರ ಹೇಳಿದರು. ಪಟ್ಟಣದ ಶ್ರೀ ಕಾಳಿಕಾದೇವಿ ಮಂದಿರದಲ್ಲಿ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಲಿಂ.ಶ್ರೀ ಶಂಕ್ರಪ್ಪ ಸೋನಾರ ದಂಪತಿ ಹಾಗೂ ಲಿಂ.ಶೀ ಸುಖಾರಾಮ ನೂಲಿಕರ ಇವರ ಸ್ಮರಣಾರ್ಥವಾಗಿ ಹಮ್ಮಿಕೊಂಡ ದತ್ತಿ ನಿಧಿ ಉಪನ್ಯಾಸ ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಆಗಮಿಸಿ ಅವರು ಮಾತನಾಡಿದರು. ಆಧ್ಯಾತ್ಮಿಕ ಚಿಂತನೆಗಳ ಕೊರತೆಯಿಂದಾಗಿ ನಾವಿಂದು ಭೌತಿಕವಾದಿಗಳಾಗುತ್ತಿದ್ದೇವೆ. ನಾನು ನನ್ನದೆಂಬ ಭಾವವನ್ನು ತ್ವ–ರೆದು ಬಸವಾದಿ ಶರಣರು ತಿಳಿಸಿದ ಕಾಯಕ ಮತ್ತು ದಾಸೋಹವನ್ನು ಅಳವಡಿಸಿಕೊಂಡು ಜೀವನವನ್ನು ಸಾರ್ಥಕ ಗೊಳಿಸಿಕೊಳ್ಳಬೇಕಾಗಿದೆ ಎಂದರು. ಕಸಾಪ ಗೌರವ ಕಾರ್ಯದರ್ಶಿ ಗಂಗಾಧರ ಕಸ್ತೂರಿ ಮಾತನಾಡಿ ದತ್ತಿನಿಧಿಗಳು ಸಾಹಿತ್ಯ ಪರಿಷತ್ತಿನ ಆದಾಯದ ಪ್ರಮುಖ ಮೂಲವಾಗಿವೆ. ಇದರಿಂದಲೇ ಪರಿಷತ್ತಿನ ಚಟುವಟಿಕೆಗಳು ನಡೆಯುತ್ತವೆ ಇಂದಿನ ಕಾರ್ಯಕ್ರಮದ ದತ್ತಿ ದಾನಿಗಳಾದ ಶ್ರೀನಿವಾಸ ಸೋನಾರ ಹಾಗೂ ಕಸಾಪ ಮಾಜಿ ಅಧ್ಯಕ್ಷರಾದ ಶ್ರೀಮತಿ ಶಾಂತಾಬಾಯಿ ನೂಲಿಕರ ಅವರು ತಮ್ಮ ಹಿರಿಯರ ಸ್ಮರಣಾರ್ಥವಾಗಿ ದತ್ತಿ ನಿಧಿ ನೀಡಿದ್ದಾರೆ ಲಿಂಗೈಕ್ಯರು ಸಾರ್ಥಕ ಬದುಕನ್ನು ನಡೆಸಿದವರಾಗಿದ್ದಾರೆ ಅವರ ಜೀವನ ನಮಗೆ ಮಾದರಿಯಾಗಬೇಕು ಎಂದ ಅವರು ಸಮೀಪದಲ್ಲಿಯೇ ನೂತನ ತಾಳಿಕೋಟಿ ತಾಲೂಕಿನ ಪ್ರಥಮ ಸಾಹಿತ್ಯ ಸಮ್ಮೇಳನ ಜರುಗಲಿದೆ ಅದಕ್ಕೆ ತಮ್ಮೆಲ್ಲರ ತನು ಮನ ಧನದ ಸಹಕಾರ ಬೇಕು ಎಂದರು. ಶಿಕ್ಷಕ ಚೆನ್ನಪ್ಪ ಮೆಣಸಿನಕಾಯಿ ಮಾತನಾಡಿ 12ನೇ ಶತಮಾನದಲ್ಲಿ ಬಸವಣ್ಣನವರು ಕಾಯಕದ ಮಹತ್ವವನ್ನು ಸಾರಿ ಹೇಳಿದರು ಕಾಯಕ ಯಾವುದೇ ಎಂತಹದೆ ಆಗಿರಲಿ ಅದನ್ನು ಶ್ರದ್ಧಾ ಭಕ್ತಿಯಿಂದ ಮಾಡಿದರೆ ಸ್ವರ್ಗ ಪ್ರಾಪ್ತಿಯಾಗುತ್ತದೆ ಎಂದು ತಿಳಿಸಿದ್ದಾರೆ ಎಂದರು. ಬಿ.ಆರ್.ಪೋಲಿಸ ಪಾಟೀಲ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ವೇದಿಕೆಯಲ್ಲಿ ಪುರಸಭೆ ಮಾಜಿ ಸದಸ್ಯ ಪ್ರಭುಗೌಡ ಮದರಕಲ್. ಕಸಾಪ ಅಧ್ಯಕ್ಷ ಆರ್.ಎಲ್.ಕೊಪ್ಪದ. ದತ್ತಿ ಧಾನಿಗಳ ಶ್ರೀಮತಿ ಶಾಂತಾಬಾಯಿ ನೂಲಿಕರ.ಶ್ರೀನಿವಾಸ ಸೋನಾರ. ಪತ್ರಕರ್ತ ಅಬ್ದುಲಗನಿ ಮಕಾನದಾರ ಇದ್ದರು. ಕಾರ್ಯಕ್ರಮದಲ್ಲಿ ಸಾಹಿತಿ ಅಶೋಕ ಹಂಚಲಿ.ಕದಳಿ ವೇದಿಕೆಯ ಅಧ್ಯಕ್ಷೆ ಉಮಾ ಫಿವಾರಿ.ಡಾ.ಎ.ಎ.ನಾಲಬಂದ. ಡಾ. ನಜೀರ ಅಹ್ಮದ್ ಕೋಳ್ಯಾಳ. ಜಾಲವಾದಿ ಸರ್. ಸಂಗನಗೌಡ ಅಸ್ಕಿ. ಜಗದೀಶ ಬಿಳೇಬಾವಿ. ಸಿ ಆರ್ ಸಿ ರಾಜು ವಿಜಾಪೂರ. ಬಾಗೇವಾಡಿ ಸರ್. ವಿಶ್ವನಾಥ್ ಪಾಟೀಲ. ಚೆನಮಲ್ಲು ಕತ್ತಿ. ಅಣ್ಣಪ್ಪ ವಾಲಿ. ಸಿದ್ದಾರ್ಥ ಕಟ್ಟಿಮನಿ ಹಾಗೂ ಕಸಾಪ ಪದಾಧಿಕಾರಿಗಳು ಸದಸ್ಯರು ಕನ್ನಡಾಭಿಮಾನಿಗಳು ಇದ್ದರು. ಶರಣ ಮಹಾಂತೇಶ ಮುರಾಳ ಪ್ರಾರ್ಥಿಸಿದರು. ಶಿಕ್ಷಕ ಜಾಮಗೊಂಡ ಸ್ವಾಗತಿಸಿದರು. ದತ್ತಿ ನಿಧಿ ಸಂಚಾಲಕ ಆರ್.ಬಿ.ದಾನಿ ನಿರೂಪಿಸಿದರು.

# ಮಹಾ ಜನತೆಯ ದಶಕಗಳ ಕನಸನ್ನು ಈಡೇರಿಸಿದ: ಶಾಸಕ ಕೆ. ನೇಮಿರಾಜ ನಾಯ್ಕ





**ಕೊಟ್ಟೂರು :** ಹೊಸದಾಗಿ ತಾಲೂಕು ಘೋಷಣೆಯಾಗಿ ಐದಾರು ವರ್ಷಗಳು ಕಳೆದರು, ನೆಪಕ್ಕೆ ಮಾತ್ರ ತಾಲ್ಲೂಕು ಕೇಂದ್ರವೆಂದು ಕೊಟ್ಟೂರು ಪಟ್ಟಣವನ್ನು ಕಳೆದ ಐದಾರು ವರ್ಷದಿಂದ ಕರೆ–ಯುತ್ತಿದ್ದಾರೆ, ಆದರೇ ಇಲ್ಲಿ ಇನ್ನೂ ಸಹ ಅಧಿಕೃತವಾಗಿ ಸರಕಾರಿ ಕಛೇರಿಗಳನ್ನು ಪ್ರಾರಂಭಿಸಿಲ್ಲ.

ಈ ಕ್ಷೇತ್ರದ ಮತದಾರರ ಆಶೀರ್ವಾದದಿಂದ, ಶಾಸಕರಾದ ನೇಮಿರಾಜ ನಾಯ್ಕ್, ಈ ಭಾಗದ ಮತದಾರರ ಸಮಸ್ಯೆಗಳನ್ನು ಹಾಗೂ ತಾಲೂಕಿನಲ್ಲಿ ಸರಕಾರಿ ಕಛೇರಿಗಳನ್ನು ಪ್ರಾರಂಭಿಸಲು ಅತಿರಥ ಪ್ರಯತ್ನವನ್ನು ಮಾಡುತ್ತ ಬಂದುದ್ದಾರೆ, ಇದೀಗ ಅವರ ಪರಿಶ್ರಮ, ಜನರ ಒತ್ತಾಸೆಯ ಬೇಡಿಕಡಯಿಂದ ಇದೀಗ, ಕೊಟ್ಟೂರಿನಲ್ಲಿ ಜೆಸ್ಕಾಂ ಉಪವಿಭಾಗವನ್ನು ಪ್ರಾರಂಭಿಸಲು ಸರಕಾರದಿಂದ ಅಧಿಕೃತ ಆದೇಶ ಹೊರಬಂದಿದೆ.

ಶ್ರೀಗುರು ಕೊಟ್ಟೂರೇಶ್ವರ ಆಶೀರ್ವಾದದಿಂದ, ಈ ಭಾಗದಲ್ಲಿ ಜ್ವಲಂತ ಸಮಸ್ಯೆಯಾಗಿ ಉಳಿದಿದ್ದ, ಕೆಇಬಿ ಸಬ್ ಸ್ಟೇಷನ್ (ಉಪ ವಿಭಾಗ ಕಛೇರಿ) ಆದೇಶ ಮಾಡಿಸಿದ ಕೀರ್ತಿ ಶಾಸಕರಿಗೆ ಸಲ್ಲುತ್ತದೆ.

ಈ ಭಾಗದಲ್ಲಿ ವಿದ್ಯುತ್ ಸಂಬಂಧಿತ ಉಂಟಾಗುತ್ತಿದ್ದ ಸಮಸ್ಯೆಗಳಿಗೆ ತತ್ಕ್ಷಣವೇ ಕೊಟ್ಟೂರು ನಲ್ಲೇ ಮಂಜೂರಾತಿ ಆದೇಶ ದೊರೆಯುತ್ತದೆ.

ಅಗತ್ಯತೆಗಳ ಪ್ರಕಾರ ಸಾರ್ವಜನಿಕರಿಗೆ ಉತ್ತಮ ಗುಣಮಟ್ಟದ ಸೇವೆ ಒದಗಿಸುವ ದೃಷ್ಟಿಯಿಂದ, ಉತ್ತಮ ಆಡಳಿತಾತ್ಮಕ ನಿಯಂತ್ರಣ ಮತ್ತು ಆಡಳಿತದಲ್ಲಿ ದಕ್ಷತೆ ಹೊಂದಲು ಸಹಕಾರಿ ಆಗುತ್ತದೆ. ಸಾರ್ವಜನಿಕರು ಕೂಡ್ಲಿಗಿ– ಹಗರಿಬೊಮ್ಮನಹಳ್ಳಿ ಹೋಗುವ ಅಲೆದಾಟವನ್ನು ಕಡಿಮೆಯಾಗುತ್ತದೆ, ಕೊಟ್ಟೂರಿನಲೇ ಜೆಸ್ಕಾಂ ಸೇವೆಗಳು ದೊರೆಯುತ್ತವೆ. ಅನುದಾನದ ಕೊರತೆ ಕಡಿಮೆ ಆಗುತ್ತದೆ.

ಉಪ ವಿಭಾಗ ಕೇಂದ್ರ ವ್ಯಾಪ್ತಿ ಕೊಟ್ಟೂರು ತಾಲ್ಲೂಕಿಗೆ ಸೀಮಿತ ಗೊಂಡಿರುವುದರಿಂದ ಸೇವೆಗಳು ನೀಡುವಿಕೆ ತ್ವರಿತವಾಗುತ್ತದೆ. ಕೊಟ್ಟೂರು ತಾಲ್ಲೂಕಿನಲ್ಲೇ ಅಂ–ದಾಜು 2 ಕೋಟಿಗೂ ಹೆಚ್ಚು ಆದಾಯ ಸಂಗ್ರಹಣ ಆಗುವುದರಿಂದ, ಅಭಿವೃದ್ಧಿ ಅನುಕೂಲ ಆಗುತ್ತದೆ.

ಜೆಸ್ಕಾಂ ಉಪವಿಭಾಗ ಕಛೇರಿ ಅನುಮೊದನೆಗೊಂಡ ನಂತರ ಭಾಗದ ಮತದಾರರು, ಮುಖಂಡರು ಅಭಿನಂದನೆಗಳನ್ನು ತಿಳಿಸಿದರು. ಇನ್ನೂ ಮುಂದಿನ ದಿನಗಳಲ್ಲಿ ಈ ಭಾಗದಲ್ಲಿ ಅನೊಮೊದನೆಗೊಳ್ಳದ ಇತರೇ ಸರಕಾರಿ ಕಛೇರಿಗಳನ್ನು ಅನುಮೋದನೆಗೊಳಿಸಲು ಶಾಸಕರು, ಶ್ರಮಿಸಬೇಕು ಎಂದು ಸಾರ್ವಜನಿಕರು ತಿಳಿಸಿದರು.

# ಸರಕಾರಿ ಶಾಲೆಗಳಿಂದ ಮಾತ್ರ ಪರಿಪೂರ್ಣ ವ್ಯಕ್ತಿತ್ವ ಸಾಧ್ಯ



**ಜಮಖಂಡಿ :** ಸರಕಾರಿ ಶಾಲೆಗಳು ಜೀವನದ ಪಾಠಗಳನ್ನು ಕಲಿಸಿಕೊಡುವ ದೇವಾಲಯವಾಗಿದ್ದು ನಿಜವಾದ ಪ್ರತಿಭೆಗಳು ಹೊರಹೊಮ್ಮುವ ತಾಣವಾಗಿದೆ. ಬಹಳಷ್ಟು ನೇತಾರರು, ಉನ್ನತ ಅಧಿಕಾರಿಗಳನ್ನು ದೇಶಕ್ಕೆ ನೀಡಿದ ಹೆಮ್ಮೆ ನಮ್ಮ ಸರಕಾರಿ ಶಾಲೆಗಿದೆ ಎಂದು ರಾಜ್ಯದ ಅಬಕಾರಿ ಸಚಿವ, ಬಾಗಲಕೋಟೆ ಜಿಲ್ಲೆಯ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಹೇಳಿದರು. ಅವರು ಜಮಖಂಡಿ ತಾಲೂಕಿನ ಕುಂಬಾರಹಳ್ಳದ ಸರಕಾರಿ ಪ್ರೌಢ ಶಾಲೆ (ಆರ್.ಎಂ.ಎಸ್.ಎ)ಯ ನೂತನ ಶಾಲಾ ಕಟ್ಟಡದ ಉದ್ಘಾಟನೆ ಮತ್ತು ದಶಮಾನೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ ಇಂದು ಖಾಸಗಿ ಶಾಲೆಯ ಪ್ರಭಾವಕ್ಕೆ ಸಿಲುಕಿ ಸರಕಾರಿ ಶಾಲೆಗಳ ಮಹತ್ವ ಕಡಿಮೆಯಾಗುತ್ತಿದೆ ಆದರೆ ಮತ್ತೆ ಪುನ: ಪಾಲಕರು ಸರಕಾರಿ ಶಾಲೆಗಳತ್ತ ಮುಖ ಮಾಡುವ ದಿನ ದೂರವಿಲ್ಲ, ನಾನು ದೇವಾಲಯವನ್ನು ಉದ್ಘಾಟನೆ ಮಾಡಿದ್ದಕ್ಕಿಂತ ಹೆಚ್ಚು ಸಂತಸದಿಂದ ಈ ಸರ್ವಜನಾಂಗದ ದೇವಾಲಯವನ್ನು ಉದ್ಘಾಟಿಸಿದ್ದೇನೆ. ಇಲ್ಲಿ ಉತ್ತಮ ಸಂಸ್ಕಾರಯುತ ಶಿಕ್ಷಣ ದೊರೆಯುತ್ತಿದ್ದು ಸುತ್ತಮುತ್ತಲಿನ ಪಾಲಕರು ಇದರ ಸದುಪಯೋಗಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಸ್ವತ: ಕ್ರೀಡಾಪಟುಗಳಾದ ಸಚಿವರು ಕುಂಬಾರಹಳ್ಳ ಪ್ರೌಢ ಶಾಲೆ ಸುಂದರವಾದ ಕಾಂಪೌಂಡ ಮತ್ತು ಮೈದಾನವನ್ನು ನಿರ್ಮಿಸಿ ಕೊಡಲು ಶ್ರಮಿಸುತ್ತೇನೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಜಮಖಂಡಿ ವಿಧಾನ ಸಭಾ ಮತಕ್ಷೇತ್ರದ ಜನಪ್ರಿಯ ಶಾಸಕ ನಾಡೋಜ ಜಗದೀಶ ಗುಡಗುಂಟಿ ಭಾರತದ ಭವಿತವ್ಯವು ಶಾಲೆಗಳಲ್ಲಿ ಅಡಗಿದ್ದು ಗುರುಗಳು ಅತ್ಯಂತ ಭಕ್ತಿಯಿಂದ ತಮ್ಮ ಕಾಯಕವನ್ನು ನೇರವೇರಿಸಬೇಕು. ನಿಮ್ಮ ಮಕ್ಕಳು ನಿಮ್ಮನ್ನು ಸಲಹದಿದ್ದರೂ ನೀವು ಕಲಿಸಿದ ಮಕ್ಕಳು ನಿಮ್ಮನ್ನು ಸಲಹುತ್ತಾರೆ. ಪುಣ್ಯದ ಫಲದಿಂದ ಶಿಕ್ಷಕ ವೃತ್ತಿ ಲಭಿಸುತ್ತದೆ ಇದನ್ನು ಸಾರ್ಥಕಪಡಿಸಿಕೊಳ್ಳಿ, ನಿಮ್ಮ ಶಾಲೆಗೆ ಬೇಕಾದ ಸಕಲ ಸೌಲಭ್ಯಗಳನ್ನು ಒದಗಿಸಲು ನಾನು ಯತ್ನಿಸುತ್ತೇನೆ ಎಂದು ಹೇಳಿದರು.

ದಿವ್ಯ ಸಾನಿಧ್ಯವಹಿಸಿ ಆಶೀರ್ವಚನ ನೀಡಿದ ಶ್ರೀ ಮಲ್ಲಿಕಾರ್ಜುನ ಗುರುದೇವಾಶ್ರಮ ಹುಲ್ಯಾಳದ ಪರಮಪೂಜ್ಯ ಶ್ರೀ ಹರ್ಷಾನಂದ ಸ್ವಾಮಿಗಳು *ಶಾಲೆಗಳು ತಲೆ ಎತ್ತಿದರೆ ಆಲಸ್ಯ ಮತ್ತು ಚಟಗಳು ದೂರಾಗುತ್ತವೆ, ವಿದ್ಯೆಯು ಮಾನವನನ್ನು ಸ್ವಾವಲಂಬಿಯಾಗಿಸುವ ಜೊತೆಗೆ ಮಾನವತೆಯನ್ನು ಕಲಿಸಿಕೊಡಬೇಕು. ಪ್ರತಿಯೊಬ್ಬರು ಶಾಲೆಯ ಅಭಿವೃದ್ಧಿಗಾಗಿ ಶ್ರಮಿಸಬೇಕು. ಶಾಲೆಯ ಕೆಲಸ ದೇವರ ಕೆಲಸ ಎಂಬ ಭಾವ ಮೂಡಲಿ ಎಂದು ಹರಸಿದರು.

ಮುಖ್ಯ ಅತಿಥಿಗಳಾಗಿ ಕುಂಬಾರಹಳ್ಳ ಗ್ರಾಮಪಂಚಾಯಿತಿ ಅಧ್ಯಕ್ಷೆ ಶಾಂತವ್ವ ಐನಾಪುರ, ಮಾಜಿ ಶಾಸಕ ಶ್ರೀಕಾಂತ ಕುಲಕರ್ಣಿ, ಮಾಜಿ ವಿಧಾನ ಪರಿಷತ್ ಸದಸ್ಯ ಜಿ.ಎಸ್.ನ್ಯಾಮಗೌಡ ಪಾಲ್ಗೊಂಡಿದ್ದರು.

ವಿಶೇಷ ಆಹ್ವಾನಿತರಾಗಿ ಜಿಲ್ಲಾಧಿಕಾರಿ ಶ್ರೀಮತಿ ಜಾನಕಿ ಕೆ.ಎಮ್. ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಶಶಿಧರ ಕುರೇರ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಬಿ.ಕೆ.ನಂದನೂರ, ಜಮಖಂಡಿ ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ. ಜಮಖಂಡಿಯ ತಹಶೀಲ್ದಾರ ಸದಾಶಿವ ಮಕ್ಕೋಜಿ, ತಾಲೂಕ ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿ ಸಂಜೀವ ಜುನ್ನೂರ, ನಿವೃತ್ತ ಮುಖ್ಯೋಪಾಧ್ಯಾಯ ಎಂ.ಡಿ.ಸಂಖ, ಅಭಿಯಂತರರಾದ ಮಲ್ಲನಗೌಡ ಬಿರಾದರ, ಎಸ್.ಕೆ.ನಾಯಕ, ರಾಮಪ್ಪ ರಾಠೋಡ, ಗ್ರಾಮ ಪಂಚಾಯತಿಯ ಸರ್ವ ಸದಸ್ಯರು, ಊರಿನ ಗುರುಹಿರಿಯರು, ಶಿಕ್ಷಣ ಪ್ರೇಮಿಗಳು ಉಪಸ್ಥಿತರಿದ್ದರು.

ಮುಖ್ಯೋಪಾಧ್ಯಾಯ ನಾರಾಯಣ ಶಾಸ್ತ್ರಿ ಪ್ರಾಸ್ತಾವಿಕ ನುಡಿಗಳನ್ನು ಆಡಿ–ದರು. ಶಿಕ್ಷಕ ಸಂಗನಬಸನ ಉಟಗಿ ದಶಮಾನೋತ್ಸವದ ವರದಿಯನ್ನು ಪ್ರಸ್ತುತಪಡಿಸಿದರು.

ಇದೇ ಸಂದರ್ಭದಲ್ಲಿ ಹತ್ತು ವರ್ಷದಿಂದ ಶಾಲೆಗೆ ಪ್ರಥಮ ಬಂದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಕ್ಷೇತ್ರ ಶಿಕ್ಷಣಾಧಿಕಾರಿ ಎ.ಕೆ.ಬಸಣ್ಣವರ ಸ್ವಾಗತಿಸಿದರು.

ಶಿಕ್ಷಕಿ ಶಾರದಾ ಮಠ ನಿರೂಪಿಸಿದರು. ಶಿಕ್ಷಕ ಬಾಹುಬಲಿ ಮುತ್ತೂರ ವಂದಿಸಿದರು.

# ರಿಯಾಜುದ್ದೀನ್ ಖಾಜಿಯವರ ನೂತನ ಕಚೇರಿಯ ಸದ್ರುದ್ದೀನ್ ಅವರ ವಿರುದ್ಧ ಕಲಬುರಗಿ ವಕ್ಫ್ ಅಧಿಕಾರಿ ಸಿ.ಇ.ಓ ವಕ್ಫ್‌ಗೆ ಮನವಿ




**ಕಲಬುರ್ಗಿ :** ರಿಯಾಜುದ್ದೀನ್ ಖಾಜಿ ಅತ್ನೂರ್ ಅವರ ಪುತ್ರ ಸದ್ರುದ್ದೀನ್ ಅವರ ಹೊಸ ಖಾಜಿ ಕಚೇರಿಯು ಗೊತ್ತುಪಡಿಸಿದ ಅಧಿಕಾರ ವ್ಯಾಪ್ತಿಯಿಂದ ಹೊರಗಿದೆ.

ಜಿಲ್ಲಾ ವಕ್ಫ್ ಅಧಿಕಾರಿ ಕಲಬುರಗಿ ಶ್ರೀ ಹಜರತ್ ಅಲಿ ನದಾಫ್ ಅವರು ಕರ್ನಾಟಕ ಸರ್ಕಾರದ ವಕ್ಫ್ ಮಂಡಳಿಯ ಸಿ.ಇ.ಒ.

ಪಾಯಿಂಟ್ ಸಂಖ್ಯೆ 15 ರಲ್ಲಿ ಅವರು ತಮ್ಮ ವಿನಂತಿಯ ವರದಿಯಲ್ಲಿ ರಿಯಾಜುದ್ದೀನ್ ಖಾಜಿ ಯವರ ಪುತ್ರ ಮತ್ತು ಅಥ್ನೂರ್ ನಿವಾಸಿ ಸದ್ರುದ್ದೀನ್ ಅವರನ್ನು ದಿನಾಂಕ 28–03–2018 ರ ಸರ್ಕಾರಿ ಆದೇಶ ಸಂಖ್ಯೆ MWD 90 WES 2016 ರ ಮೂಲಕ ಖಾಜಿ ಯಾಗಿ ನೇಮಿಸಲಾಯಿತು, ಅಫ್ಜಲ್ಪುರ ಟಿ ಸುತ್ತಮುತ್ತಲಿನ 90 ಗ್ರಾಮಗಳ ವ್ಯಾಪ್ತಿಯಲ್ಲಿ ನಿಕಾಹ್ ಸಮಾರಂಭಗಳನ್ನು ನಿರ್ವಹಿಸುವ ಜವಾಬ್ದಾರಿಯೊಂದಿಗೆ. ಕಲಬುರಗಿ ಜಿಲ್ಲೆ.

ಆದಾಗ್ಯೂ, ಅವರು ಇತ್ತೀಚೆಗೆ ಕಲಬುರಗಿ ನಗರದಲ್ಲಿ ಹೊಸ ಕ್ವಾಜಿ ಕಚೇರಿಯನ್ನು ಸ್ಥಾಪಿಸಿದ್ದಾರೆ ಮತ್ತು ಅವರ ಗೊತ್ತುಪಡಿಸಿದ ಅಧಿಕಾರ ವ್ಯಾಪ್ತಿಯಿಂದ ಹೊರಗಿರುವ ನಿಕಾಹ್ ಸಮಾರಂಭಗಳನ್ನು ನಿರ್ವಹಿಸುತ್ತಿದ್ದಾರೆ.

ಕಲಬುರಗಿ ನಗರದಲ್ಲಿ ಖಾಜಾತ್ ಕಚೇರಿಯನ್ನು ನಿರ್ವಹಿಸುವ ಮತ್ತು ಅಲ್ಲಿ ನಿಕಾಹ್ ಸಮಾರಂಭಗಳನ್ನು ನಡೆಸುವ ಅವರ ಅಧಿಕಾರದ ನ್ಯಾಯಸಮ್ಮತತೆ ಅನಿಶ್ಚಿತವಾಗಿದೆ.

**ಇಮ್ರಾನ್ ಖಾನ್ ಕಲಬುರಗಿ ವರದಿ**

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State